ನಮ್ಮ ಮಾನಸಿ

ಸಂಪುಟ : 1 ಮೇ 2007 ಸಂಚಿಕೆ : 1

ಲಿಂಗತ್ವ ಎಂದರೇನು?

ಜನರ ಪ್ರೀತಿ ನನ್ನನ್ನು ಕಾಪಾಡಿದೆ

ಏಳನೆಯ ರಾಷ್ಟ್ರೀಯ ಸಮಾವೇಶ

ಸೀರೆ (ಕವನ)

ಗಂಭೀರ (ಕವನ)

ನಮ್ಮ ಮಾನಸಿ

ಜನವರಿ 2007

ಸಂಪುಟ : 1 ಸಂಚಿಕೆ : 1

ಸೂಚನೆ :

ಬಿಡಿಪ್ರತಿ	10–00 ರೂ.
ವಾರ್ಷಿಕ ಚಂದಾ	100–00 ರೂ.
ಸಂಸ್ಥೆಗಳಿಗೆ	150–00 ರೂ.

ಪರಿವಿಡಿ

ನಮ್ಮ ಮಾನಸಿ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಕಛೇರಿ ವಿಳಾಸ :
34/1, 2ನೇ ಕ್ರಾಸ್
ಆಜಾದ್ ನಗರ, ಚಾಮರಾಜಪೇಟೆ
ಬೆಂಗಳೂರು – 560 018



ಸಂಪಾದಕೀಯ

ನಮ್ಮ ಮಾನಸ ಕುರಿತು....

ಆತ್ಮೀಯ ಸಂಗಾತಿ,

ನಿಮ್ಮೊಂದಿಗೆ ಸಂವಾದ, ಯೋಗಕ್ಷೇಮಗಳಿಗಾಗಿ ಮತ್ತೆ ಬಂದಿದ್ದೇವೆ. ಈಗ ಮಾನಸ ಪತ್ರಿಕೆ 'ನಮ್ಮ ಮಾನಸ'ವಾಗಿ ನಿಮ್ಮ ಕೈಯಲ್ಲಿದೆ. ನಮ್ಮ-ನಿಮ್ಮ ಗೆಳೆತನ ಇಂದು ನಿನ್ನೆಯದಲ್ಲ. ಅದೆಷ್ಟು ಬಗೆಯಲ್ಲಿ ನಮ್ಮೊಂದಿಗೆ ಬೆರೆತಿರಿ! ಪತ್ರಿಕೆ ಬರಲು ತಡವಾದಾಗೆಲ್ಲ ಏನಾಯಿತು? ಏನಾದರೂ ನೆರವು ಕೊಡೋಣವೆ? ಎಂದು ಅಕ್ಕರೆ ತೋರಿದಿರಿ. ಇದ್ದುದರಲ್ಲೇ ಒಂದಷ್ಟು ಆರ್ಥಿಕ ನೆರವು ನೀಡಿ ಹಂಚಿಕೊಂಡಿರಿ. ಪ್ರೀತಿಯಿಂದ ಲೇಖನಗಳನ್ನು ಬರೆದಿರಿ; ಬರೆಸಿದಿರಿ. ಎಲ್ಲರಿಗೂ ಮಾನಸವನ್ನು ಪರಿಚಯಿಸಿದಿರಿ, ಓದುಗ ಬಳಗ ಹೆಚ್ಚಲು ಕಾರಣರಾದಿರಿ. ನಿಮಗಾಗಲೀ ನಮಗಾಗಲೀ ಇದು ಎಂದೂ ಲೇವಾದೇವಿಯಾಗಲಿಲ್ಲ. ಅದೊಂದು ಪ್ರೀತಿಯ ಕೆಲಸವಾಗಿತ್ತು. ಮನಸ್ಸುಗಳನ್ನು, ಆಲೋಚನೆಗಳನ್ನು ಬೆಸೆಯುತ್ತ ಹಂಚಿಕೊಳ್ಳುವ ಕೆಲಸವಾಗಿತ್ತು.

ಇಂಥ ಅನನ್ಯ ಪ್ರೀತಿಯಿಂದ ಕೊಂಚಕಾಲ ವಂಚಿತರಾದೆವು. ಆದರೆ ನಮ್ಮ ಮನಸ್ಸಿನಲ್ಲಿ ಸದಾ ನೀವೇ ಇದ್ದಿರಿ. ಭೇಟಿ ಆದಾಗೆಲ್ಲ ಬೇಗ ಮಾನಸ ಕೊಡಿ ಎಂದು ಪ್ರೀತಿಯಿಂದ ಕೇಳುತ್ತಲೇ ಇದ್ದಿರಿ. ನಿಮಗೆ ಗೊತ್ತಿದೆ, ಮಾನಸ ನಿಮ್ಮಗಳ ಆರೈಕೆಯಲ್ಲೇ ಬೆಳೆದುಬಂತು. 1985ರಲ್ಲಿ ಪ್ರಾರಂಭವಾದಾಗ ನಾವು ಕೆಲವರೇ ಸಾಹಸ ಮಾಡಿದ್ದೆವು. ಮುಂದೆ ನೀವೆಲ್ಲ ಕೈಜೋಡಿಸಿ ನಮಗೆ ಆನೆಬಲ ತಂದುಕೊಟ್ಟಿರಿ. ವಿಚಾರ ಸಂಕಿರಣಗಳು, ಸಂವಾದಗಳು, ಪುಸ್ತಕ ಪ್ರಕಾಶನ ಹೀಗೆ ಅದೆಷ್ಟು ಬಾರಿ ನಾವು-ನೀವು ಒಡನಾಡಿದೆವು. ಕಷ್ಟಸುಖ ಹಂಚಿಕೊಂಡೆವು. ಕೆಲವು ಅನಿವಾರ್ಯ ಕಾರಣಗಳಿಂದಾಗಿ ನಿಮಗೆ ತಿಳಿಸುವ ವ್ಯವಧಾನವೂ ಇಲ್ಲದೆ ಪತ್ರಿಕೆ ಸ್ಥಗಿತಗೊಂಡಿತು. ಕಳೆದ 27 ವರ್ಷಗಳ ನಮ್ಮ-ನಿಮ್ಮ ನಂಟನ್ನು ಕೊಂಚ ಸಮಯ ವ್ಯಥೆಯಿಂದಲೇ ಬಿಟ್ಟುಕೊಡುವಂತಾಯಿತು. ನಮ್ಮಿಂದ ನಿಮಗೆ ಇಂಥ ತೊಂದರೆ ಆಗಬಾರದೆಂಬ ನಮ್ಮ ಪ್ರಯತ್ನ ಸಫಲವಾಗಲಿಲ್ಲ.

ಈಗ ಮಾನಸ ಹೊಸ ಸ್ವರೂಪದಲ್ಲಿ ನಿಮ್ಮ ಮನೆ-ಮನ ಎರಡನ್ನೂ ತಲುಪುತ್ತಿದೆ. 1985ರಲ್ಲಿ ಸ್ತ್ರೀವಾದದ ನೆಲೆಯಲ್ಲಿ ಪ್ರಾರಂಭವಾದ ಮಾನಸ ಹಲವಾರು ಏಳು-ಬೀಳುಗಳೊಂದಿಗೆ ಓದುಗರ ಮನದಲ್ಲಿ ದೃಢವಾಗಿ ಬೇರೂರಿದೆ ಎಂಬುದಕ್ಕೆ ತಮ್ಮ ಪ್ರೀತಿಯೇ ಸಾಕ್ಷಿ.

ಕಳೆದ ಒಂದೂವರೆ ವರ್ಷದಿಂದ (ಮಾನಸ ತಿಂಗಳ ಪತ್ರಿಕೆಯ ಕೊನೆಯ ಸಂಚಿಕೆ ಡಿಸೆಂಬರ್ 2005, ಸಂಪುಟ-20, ಸಂಚಿಕೆ-11) ಪತ್ರಿಕೆಯನ್ನು ಹಲವಾರು ತಾಂತ್ರಿಕ ಕಾರಣಗಳಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲ. ಜಾಗತೀಕರಣ, ಖಾಸಗೀಕರಣದ ಪ್ರಭಾವದಿಂದಾಗಿ ಅಂಚೆ ಇಲಾಖೆಯು ಅಂಚೆ ರಿಯಾಯಿತಿಯ ನಿಯಮಗಳನ್ನು ತುಂಬಾ ಬಿಗಿಗೊಳಿಸಿದೆ. ಚಂದಾದಾರರ ಪಟ್ಟಿಯನ್ನು ಅಂಚೆ ಇಲಾಖೆಗೆ ನೀಡುವುದು, ಚಂದಾದಾರರಿಗೆ ಮಾತ್ರ ಪತ್ರಿಕೆಯನ್ನು ಕಳುಹಿಸಬೇಕು, ಚಂದಾ ಹಣ ನೀಡಿದವರಿಗೆ ಕಡ್ಡಾಯ ರಸೀದಿ ನೀಡಿ, ಅದರ ನಕಲನ್ನು ಅಂಚೆ ಇಲಾಖೆಗೆ ನೀಡುವುದು, ನಿಗದಿತ ದಿನಾಂಕದಲ್ಲಿ ಮಾತ್ರ ಪತ್ರಿಕೆಯನ್ನು ಅಂಚೆ ಕಚೇರಿಗೆ ರವಾನಿಸುವುದು ಮುಂತಾದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇದು ತಪ್ಪಿದಲ್ಲಿ ಅಂಚೆ ರಿಯಾಯಿತಿಯನ್ನು ರದ್ದುಗೊಳಿಸಲಾಗುತ್ತದೆ. ಅಂಚೆ ರಿಯಾಯಿತಿ ದೊರೆಯದಿದ್ದರೆ ಪತ್ರಿಕೆಯನ್ನು ಕಳುಹಿಸುವುದು ಮಾನಸಕ್ಕೆ ಹೊರೆಯಾಗುತ್ತದೆ.

ಪತ್ರಿಕೆ ಕೈಗೆ ಬಂದ ಕೂಡಲೇ 'ಇಗೋ ಇರಲಿ ನಿಮ್ಮ ಬಳಿ' ಅಂತ ಜೇಬಿನಿಂದ, ಪರ್ಸ್‌ನಿಂದ ಕೈಗೆ ಸಿಕ್ಕಷ್ಟು ಹಣಕೊಟ್ಟು ಸಹಕರಿಸಿದಿರಿ. ನಿಮ್ಮಂಥವರಿಗೆ ನಾವು 'ಪೋಷಕ ಪ್ರತಿ' ಕಳಿಸುವುದಿತ್ತು. ಈಗ ಅದಾವುದಕ್ಕೂ ಅವಕಾಶವಿಲ್ಲ. ಚಂದಾಹಣ, ರಸೀತಿ ಎಂಬ ಒಂದು ನಿರ್ಭಾವುಕ ವ್ಯವಹಾರವಾಗಿಸುತ್ತಿದೆ ಈ ವ್ಯವಸ್ಥೆ.

ಜೊತೆಗೆ ನಮ್ಮ ಬಳಿ ಕೆಲವು ದಾಖಲೆಗಳು ಕಳೆದುಹೋಗಿದ್ದುವಾದ್ದರಿಂದ ಹೊಸದಾಗಿ ಶೀರ್ಷಿಕೆಯನ್ನು ರಿಜಿಸ್ಟರ್ ಮಾಡಿಸಬೇಕಾಯಿತು. ಮಾನಸದ ವಿಳಾಸವನ್ನೂ ಬದಲಾಯಿಸಲಾಗಿದೆ. ಈಗ "ನಮ್ಮ ಮಾನಸ" ಎಂಬ ಹೊಸ ಶೀರ್ಷಿಕೆಯನ್ನು ಪಡೆದು ಸಂಪುಟ 1 ರಿಂದ ಪುನಃ ಪ್ರಾರಂಭಿಸುತ್ತಿದ್ದೇವೆ.

ಇಂದಿನ ಸಾಮಾಜಿಕ ಸಂದರ್ಭದಲ್ಲಿ ಮಹಿಳಾ ಸಮಸ್ಯೆಯ ಸ್ವರೂಪ ಸಂಕೀರ್ಣಗೊಳ್ಳುತ್ತಿದೆ. ಜಾಗತೀಕರಣ, ಖಾಸಗೀಕರಣ, ಕೋಮುವಾದ, ವರ್ಗ, ಜಾತಿ ಸಮಸ್ಯೆಗಳ ಹಿನ್ನೆಲೆಯಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ದೌರ್ಜನ್ಯ, ಶೋಷಣೆಯ

ಸ್ವರೂಪವೂ ಭಿನ್ನವಾಗುತ್ತಿದೆ. ಮಹಿಳಾ ಚಳವಳಿ ಹಾಗೂ ಹೋರಾಟದಿಂದ ಪಡೆದ ಹಕ್ಕು ಬಾಧ್ಯತೆಗಳು ಮತ್ತು ಅವಕಾಶಗಳಿಂದ ವಂಚಿತರನ್ನಾಗಿಸುವ ಹುನ್ನಾರಗಳನ್ನು ಪ್ರತಿನಿತ್ಯ ನೋಡಬಹುದು. 'ನಮ್ಮ ಮಾನಸ' ಸ್ತ್ರೀವಾದದ, ಸ್ತ್ರೀಸಂವೇದನೆಯ, ಮಹಿಳಾ ಚಳವಳಿಯ ದನಿಯಾಗಬೇಕು. ಇದು ನಮ್ಮ-ನಿಮ್ಮೆಲ್ಲರ ಸಂಘಟಿತ ಆಸೆ-ಆಕಾಂಕ್ಷೆ.

ಇದುವರೆಗೂ ಓದುಗರು, ಲೇಖಕ-ಲೇಖಕಿಯರು, ಸಹೃದಯರು ನೀಡಿದ ಪ್ರೋತ್ಸಾಹ ಹಾಗೂ ಬೆಂಬಲವನ್ನು ಮುಂದೆಯೂ ನೀಡುತ್ತಾ 'ನಮ್ಮ ಮಾನಸ'ವನ್ನು ಬೆಳೆಸಬೇಕೆಂದು ವಿನಂತಿಸುತ್ತೇವೆ. 'ನಮ್ಮ ಮಾನಸ'ಕ್ಕೆ ಲೇಖನ ಕಳುಹಿಸಿಕೊಡಿ. ವಿಷಯದ ದೃಷ್ಟಿಯಿಂದಲೂ, ವಿನ್ಯಾಸದ ದೃಷ್ಟಿಯಿಂದಲೂ ತಮ್ಮ ಸಲಹೆಗಳು ಬರಲಿ. ಪ್ರತಿನಿತ್ಯದ ಕೆಲವು ಅನುಭವಗಳಿಗೆ ಒಳನೋಟಗಳನ್ನು ಕೊಟ್ಟು ಕಿರುಚಿತ್ರಣಗಳನ್ನು ಬರೆದು ಕಳಿಸಿ.

ಚಂದಾದಾರರ ಪಟ್ಟಿಯನ್ನು ಅಂಚೆ ಕಚೇರಿಗೆ ನೀಡಬೇಕಾಗಿರುವುದರಿಂದ ದಯಮಾಡಿ ಪತ್ರಿಕೆಗೆ ಚಂದಾಹಣವನ್ನು ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ಈ ವಿಷಯದಲ್ಲಿ ಎಲ್ಲರಿಗೂ ಪತ್ರಿಕೆ ತಲುಪಲಿ ಎಂಬ ನಮ್ಮ ಪ್ರಯತ್ನಗಳನ್ನು ಅಂಚೆ ವ್ಯವಸ್ಥೆ ಕಟ್ಟಿ ಹಾಕಿದೆ. ಸಹಕರಿಸಿರಿ.

* * *

ಲೈಂಗಿಕ ಶಿಕ್ಷಣದ ಅಗತ್ಯ

ಇತ್ತೀಚೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವಾಲಯ ಮಕ್ಕಳ ಮೇಲಿನ ದೌರ್ಜನ್ಯ ಕುರಿತು ಬಿಡುಗಡೆ ಮಾಡಿದ ವರದಿ ಆಘಾತಕಾರಿ ಅಂಶಗಳನ್ನು ಬೆಳಕಿಗೆ ತಂದಿದೆ. ಶೇ. 50ಕ್ಕಿಂತ ಹೆಚ್ಚು ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಪೋಷಕರು, ಕುಟುಂಬಕ್ಕೆ ಪರಿಚಯಸ್ಥರು, ಜವಾಬ್ದಾರಿ ಹೊತ್ತವರು ಹಾಗೂ ನಂಬಿಕೆಯುಳ್ಳವರಿಂದಲೇ ಈ ಅಮಾನುಷವಾದ ದೌರ್ಜನ್ಯ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಇಂದು ವಿವಾದಾತ್ಮಕ ಸಂಗತಿಯಾಗಿರುವ ಲೈಂಗಿಕ ಶಿಕ್ಷಣವನ್ನು ನೀಡಬೇಕೆ ಅಥವಾ ಬೇಡವೆ ಎಂಬ ವಿಷಯ ಹೆಚ್ಚು ಪ್ರಸ್ತುತತೆಯನ್ನು ಪಡೆಯುತ್ತದೆ.

ಲೈಂಗಿಕ ಶಿಕ್ಷಣದ ಬಗ್ಗೆ ಸರ್ಕಾರ ಹಾಗೂ ನ್ಯಾಯಾಂಗ ಎರಡೂ ಮಡಿವಂತಿಕೆಯ ದೃಷ್ಟಿಕೋನವನ್ನು ನೈತಿಕತೆಯ ಹಿನ್ನೆಲೆಯಲ್ಲಿ ವ್ಯಕ್ತಪಡಿಸುತ್ತಿವೆ. ಲೈಂಗಿಕತೆಗೆ ಸಂಬಂಧಪಟ್ಟ ಮಾಹಿತಿಯನ್ನು ವೈಜ್ಞಾನಿಕವಾಗಿ ಮತ್ತು ಆರೋಗ್ಯಕರವಾಗಿ ವಿದ್ಯಾರ್ಥಿಗಳಿಗೆ ಹಾಗೂ ಯುವಜನತೆಗೆ ನೀಡುವ ಅಗತ್ಯವಿಲ್ಲವೆ? ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಆರೋಗ್ಯಕರವಾದ ಲೈಂಗಿಕತೆ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಇದು ಮಹಿಳೆಯರ ಜೀವನದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಕುಟುಂಬದಲ್ಲಿ ಹಾಗೂ ಶಾಲೆಗಳಲ್ಲಿ ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರತಿದಿನ ಹೆಚ್ಚುತ್ತಾ ಹೋಗುತ್ತಿದೆ.

1997ರಲ್ಲಿ ದೆಹಲಿಯ ಸಾಕ್ಷಿ ಸಂಸ್ಥೆಯು ಸುಮಾರು 350 ಶಾಲೆಯ ಮಕ್ಕಳ ಸಮೀಕ್ಷೆ ನಡೆಸಿದಾಗ ಅವರಲ್ಲಿ ಸರಾಸರಿ 63 ಮಕ್ಕಳು ಕುಟುಂಬದಲ್ಲಿಯೇ ಲೈಂಗಿಕ ಹಿಂಸೆಗೆ ಒಳಗಾಗಿದ್ದರು. ಸರಾಸರಿ 25ರಷ್ಟು ಹೆಣ್ಣುಮಕ್ಕಳು ಅತ್ಯಾಚಾರಕ್ಕೆ ಒಳಗಾಗಿದ್ದರು. ಶೇ. 30ರಷ್ಟು ಮಕ್ಕಳು ತಾತ, ತಂದೆ ಅಥವಾ ಮನೆಯ ಇತರ ಸದಸ್ಯರಿಂದ ಲೈಂಗಿಕ ಹಿಂಸೆಗೆ ಒಳಗಾಗಿದ್ದರು. ಮುಂಬಯಿಯ ಟಾಟಾ ಸಾಮಾಜಿಕ ಸಂಸ್ಥೆ ಹಾಗೂ ದೆಹಲಿಯ ರಾಹಿ ಸಂಸ್ಥೆಯು ನಡೆಸಿದ ಸಂಶೋಧನೆಯು ಈ ಮೇಲಿನ ಅಂಶವನ್ನು ದೃಢಪಡಿಸುತ್ತದೆ. ಇಂತಹ ಪ್ರಕರಣಗಳು ಸಾರ್ವಜನಿಕವಾಗಿ ಚರ್ಚೆಗೆ ಒಳಗಾಗುವುದಿಲ್ಲ. ಇಂತಹ ಹಿಂಸೆ ನಡೆದಾಗ ಅದನ್ನು ಒಂದು ರಹಸ್ಯವೆಂಬಂತೆ ಕಾಪಾಡಿಕೊಂಡು ಬರಲಾಗುವುದು. ಅಜ್ಞಾನ, ಅರೆಬರೆ ಜ್ಞಾನ, ಆಮಿಷಗಳಿಗೆ ಒಳಗಾಗಿ ಲೈಂಗಿಕವಾಗಿ ಬಲಿಪಶುವಾಗುವುದು ಅವ್ಯಾಹತವಾಗಿ ನಡೆಯುತ್ತಲೇ ಇದೆ. ಲೈಂಗಿಕತೆಯ ಬಗ್ಗೆ ಚರ್ಚಿಸದೇ ಮೌನವಾಗಿರುವುದೆಂದರೆ ಎಲ್ಲಾ ಸರಿಯಾಗಿದೆ ಎಂದರ್ಥವಲ್ಲ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ಕೋಮುವಾದಿ ಮನಸ್ಸು ಲೈಂಗಿಕ ಶಿಕ್ಷಣವನ್ನು ತೀವ್ರವಾಗಿ ವಿರೋಧಿಸುತ್ತದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಲೈಂಗಿಕತೆಯ ವಿಕೃತ ಮಾಹಿತಿಗಳು ಸಿನಿಮಾ, ದೂರದರ್ಶನ, ವಿವಿಧ ಚಾನಲ್‌ಗಳಲ್ಲಿ, ಇಂಟರ್‌ನೆಟ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಯುವಜನತೆಗೆ ಲಭ್ಯವಿಲ್ಲವೆ? ಇವುಗಳಲ್ಲಿ ಲೈಂಗಿಕ ಅಭಿವ್ಯಕ್ತಿ ಆರೋಗ್ಯಕರವಾಗಿದೆಯೇ ಎಂಬುದನ್ನು ಗಮನಿಸಿದಾಗ ವಾಸ್ತವಾಂಶಗಳು ಭಿನ್ನವಾಗಿರುವುದು ಗೋಚರವಾಗುತ್ತದೆ.

ಲೈಂಗಿಕ ಶಿಕ್ಷಣದ ಸ್ವರೂಪ ಹೇಗಿರಬೇಕು, ಬೋಧಿಸುವ ಕ್ರಮ, ಶಿಕ್ಷಕರಿಗೆ ನೀಡುವ ತರಬೇತಿ ಇದು ಬೇರೆ ವಿಚಾರ. ಆದರೆ, ಸಮಸ್ಯೆಯ ಗಂಭೀರತೆ, ವಿಕೃತ ಲೈಂಗಿಕತೆಯ ರೂಕ್ಷತೆ, ಅದರ ವಿವಿಧ ಆಯಾಮ, ಮಹಿಳೆಯ ಮೇಲೆ ಆಗುತ್ತಿರುವ ಲೈಂಗಿಕ ಶೋಷಣೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕಾಗುತ್ತದೆ. ದೇಹದ ರಚನೆ, ಅಂಗಾಂಗಗಳ ಕ್ರಿಯೆ, ದೈಹಿಕ ಹಾಗೂ ಮಾನಸಿಕ ಬೆಳವಣಿಗೆ, ಪರಿಸರ ಮುಂತಾದ ವಿಚಾರಗಳನ್ನು ಕುರಿತು ವೈಜ್ಞಾನಿಕವಾದ ಶಿಕ್ಷಣ ಅತ್ಯಗತ್ಯವಾಗಿದೆ.

ಲೈಂಗಿಕ ಶಿಕ್ಷಣ ನೀಡುವುದರಿಂದ ಆರೋಗ್ಯಕರ ಪರಿಣಾಮ ಕಂಡುಬಂದಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಆರೋಗ್ಯಕರವಾದ ಮಾಹಿತಿ ಪಡೆದವರು ಸರಿಯಾದ ನಿರ್ಧಾರ ಹಾಗೂ ಆಯ್ಕೆಯನ್ನು ಮಾಡಬಲ್ಲರು. ಸಹಜೀವಿಗಳೊಂದಿಗೆ ಗೌರವಯುತವಾಗಿ, ಜವಾಬ್ದಾರಿಯಿಂದ ವರ್ತಿಸುವರು. ಹೆಣ್ಣುಮಕ್ಕಳ ಲೈಂಗಿಕ ಶೋಷಣೆ, ಪ್ರಮಾದಗಳು, ಲೈಂಗಿಕ ರೋಗಗಳನ್ನು ತಡೆಗಟ್ಟುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರವನ್ನು ವಹಿಸುತ್ತದೆ.

ಸಂಪಾದಕ ಮಂಡಳಿ

ಲಿಂಗತ್ವ (ಜೆಂಡರ್) ಎಂದರೇನು?

ಇಂಗ್ಲಿಷ್ ಮೂಲ :
ಅಂಡರ್‌ಸ್ಟ್ಯಾಂಡಿಂಗ್ ಜೆಂಡರ್
ಲೇಖಕರು : ಕಮಲಾ ಭಾಸಿನ್
ಕನ್ನಡಕ್ಕೆ : ವೆಂ. ವನಜ

'ಜೆಂಡರ್' ಎಂಬ ಪದವನ್ನು ವ್ಯಾಕರಣದಲ್ಲಿ ಕೇಳಿದ್ದೇವಾದರೂ ಈಗದು ಬೇರೆ ರೀತಿಯಲ್ಲಿ ಬಳಕೆಯಾಗುತ್ತಿದೆ. ಇದರ ಹೊಸ ಅರ್ಥವನ್ನು ತಿಳಿಸುತ್ತೀರಾ?

'ಜೆಂಡರ್' ಪದವನ್ನು ಸಮಾಜಶಾಸ್ತ್ರೀಯವಾಗಿ ಅಥವಾ ಒಂದು ಪರಿಕಲ್ಪನೆಯ ಭಾಗವಾಗಿ ಬಳಕೆಮಾಡಲಾಗುತ್ತಿದೆ. ಅದಕ್ಕೊಂದು ನಿರ್ದಿಷ್ಟವಾದ ಅರ್ಥವನ್ನು ಕೊಡಲಾಗಿದೆ. ಆ ಅರ್ಥದಲ್ಲಿ ಜೆಂಡರ್ ಅಥವಾ ಲಿಂಗತ್ವವು ಗಂಡು ಮತ್ತು ಹೆಣ್ಣುಗಳ ಸಾಮಾಜಿಕ-ಸಾಂಸ್ಕೃತಿಕ ಪರಿಭಾಷೆಗೆ, ಪುರುಷ ಮತ್ತು ಮಹಿಳೆಯರನ್ನು ಪ್ರತ್ಯೇಕವಾಗಿ ಗುರುತಿಸುವ ಮತ್ತು ಅವರಿಗೆ ಸಾಮಾಜಿಕ ಪಾತ್ರಗಳನ್ನು ಗೊತ್ತುಪಡಿಸುವ ರೀತಿಗೆ ಸಂಬಂಧಿಸಿದೆ. ಅದು ಪುರುಷ ಮತ್ತು ಮಹಿಳೆಯರಿಗೆ ಸಂಬಂಧಿಸಿದೆ. ಅದು ಪುರುಷ ಮತ್ತು ಮಹಿಳೆಯರಿಗೆ ಸಂಬಂಧಿಸಿದ ಸಾಮಾಜಿಕ ಸತ್ಯಗಳನ್ನು ಅರ್ಥಮಾಡಿಕೊಳ್ಳುವ ಒಂದು ವಿಶ್ಲೇಷಣಾತ್ಮಕ ಸಾಧನವಾಗಿ ಬಳಕೆಯಾಗುತ್ತಿದೆ.

ಮಹಿಳೆಯರ ಪರಾಧೀನತೆ ಅವರ ದೇಹ ರಚನೆಗೆ ಸಂಬಂಧಿಸಿದೆ ಯೆನ್ನುವ ಸಾಮಾನ್ಯ ಮನಃ ಪ್ರವೃತ್ತಿಯನ್ನು ಪ್ರಶ್ನಿಸಲೆಂದೇ ಲಿಂಗ ಮತ್ತು ಲಿಂಗತ್ವಗಳ ನಡುವಿನ ವ್ಯತ್ಯಾಸವನ್ನು ಪರಿಚಯಿಸಲಾಯಿತು. ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರಿಗೆ ನೀಡಿರುವ ಬೇರೆ ಬೇರೆ ಗುಣ ವಿಶೇಷಣಗಳು, ಪಾತ್ರಗಳು ಮತ್ತು ಸ್ಥಾನಮಾನಗಳು ಅವರವರ ಜೀವವಿಜ್ಞಾನಗಳಿಂದ (ಅಂದರೆ ಲಿಂಗದಿಂದ) ಪೂರ್ವ ನಿರ್ಧರಿತವಾದವು. ಅಂದರೆ ಅವು ಪ್ರಕೃತಿದತ್ತವಾದವು; ಅಂತೆಯೇ ಬದಲಾವಣೆಗೊಳಪಡಲು ಸಾಧ್ಯವಾಗದವು ಎಂದು ಶತಮಾನಗಳಿಂದ ನಂಬಲಾಗಿತ್ತು.

ಒಂದು ರೀತಿಯಲ್ಲಿ ಸಮಾಜದಲ್ಲಿ ಮಹಿಳೆಯರ ಅಧೀನತೆಯ ಸ್ಥಾನಮಾನಕ್ಕೆ, ಅವರು ಮತ್ತವರ ದೇಹಗಳೇ ಹೊಣೆಗಾರರೆಂದು ತಿಳಿಯಲಾಗಿತ್ತು; ತಿಳಿಯಲಾಗುತ್ತಿದೆ ಕೂಡ. ಇದನ್ನು ಪ್ರಕೃತಿ ಸಹಜವಾದುದೆಂದು ಒಮ್ಮೆ ಒಪ್ಪಿಕೊಂಡುದೇ ಆದಲ್ಲಿ ಸಹಜವಾಗಿಯೇ ಸಮಾಜದಲ್ಲಿರುವ ಲಿಂಗ ಅಸಮಾನತೆ ಮತ್ತು ಅನ್ಯಾಯಗಳ ಬಗ್ಗೆ ಮಾತನಾಡುವ ಅಗತ್ಯವೇ ಕಾಣುವುದಿಲ್ಲ.

ಲಿಂಗತ್ವದ ಪರಿಕಲ್ಪನೆಯಿಂದಾಗಿ ಲಿಂಗ ಒಂದಾದರೆ, ಲಿಂಗತ್ವವು ಸಂಪೂರ್ಣವಾಗಿ ಬೇರೆ ಬೇರೆ ಎನ್ನಲು ನಮಗೆ ಸಾಧ್ಯವಾಗಿದೆ.

ಪ್ರತಿಯೊಬ್ಬರೂ ಗಂಡು ಅಥವಾ ಹೆಣ್ಣಾಗಿ ಹುಟ್ಟುತ್ತೇವೆ. ನಮ್ಮ ಜನನಾಂಗವನ್ನು ನೋಡಿ ನಮ್ಮ ಲಿಂಗವನ್ನು ಸರಳವಾಗಿ ನಿರ್ಧರಿಸಬಹುದು.

ಆದರೆ ಪ್ರತಿಯೊಂದು ಸಂಸ್ಕೃತಿಯೂ ಹುಡುಗಿ-ಹುಡುಗರನ್ನು ಮೌಲ್ಯೀಕರಿಸುವ, ಅವರಿಗೆ ವಿಭಿನ್ನ ಪಾತ್ರಗಳನ್ನು, ಪ್ರತಿಸ್ಪಂದನಗಳನ್ನು, ಗುಣಲಕ್ಷಣಗಳನ್ನು ಗೊತ್ತುಪಡಿಸುವ ತನ್ನದೇ ಆದ ವಿಧಾನಗಳನ್ನು ಹೊಂದಿದೆ.

ಪ್ರತಿಯೊಂದು ಸಮಾಜವೂ ಒಂದು ಗಂಡು ಅಥವಾ ಹೆಣ್ಣನ್ನು ಕ್ರಮೇಣ ಪುರುಷತ್ವದ ಅಥವಾ ಸ್ತ್ರೀತ್ವದ ವಿಭಿನ್ನ ಗುಣಗಳಿರುವ ವರ್ತನಾ ಮಾದರಿಗಳು, ಪಾತ್ರಗಳು, ಜವಾಬ್ದಾರಿಗಳು, ಹಕ್ಕುಗಳು ಮತ್ತು ನಿರೀಕ್ಷೆಗಳಿರುವ ಪುರುಷರು ಮತ್ತು ಮಹಿಳೆಯರನ್ನಾಗಿ ಪರಿವರ್ತಿಸುತ್ತದೆ. ಜೈವಿಕವಾದ ಲಿಂಗವು ಮಾಡದಿರುವ ಮಹಿಳೆ ಮತ್ತು ಪುರುಷರೆಂಬ ಲಿಂಗತ್ವದ ಗುರುತುಗಳು ಮನೋವೈಜ್ಞಾನಿಕವಾಗಿ ಮತ್ತು ಸಾಮಾಜಿಕವಾಗಿ, ಅಂದರೆ ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಿರ್ಧರಿತವಾಗುತ್ತವೆ.

ಆ್ಯನ್ ಓಕ್ಲೆ ಅವರು ಮೊಟ್ಟಮೊದಲಿಗೆ ಲಿಂಗತ್ವದ ಪರಿಕಲ್ಪನೆಯನ್ನು ಬಳಸಿದ ಕೆಲವೇ ಸ್ತ್ರೀವಾದಿಗಳಲ್ಲಿ ಒಬ್ಬರಾಗಿದ್ದಾರೆ. ಇವರು "ಲಿಂಗತ್ವ ಒಂದು ಸಾಂಸ್ಕೃತಿಕ ವಿಷಯ. ಇದು ಪುರುಷ ಮತ್ತು ಮಹಿಳೆಯರ 'ಪುರುಷತ್ವದ' ಮತ್ತು 'ಸ್ತ್ರೀತ್ವದ' ಎಂಬ ಸಾಮಾಜಿಕ ವರ್ಗೀಕರಣಕ್ಕೆ ಸಂಬಂಧಿಸಿದೆ" ಎನ್ನುತ್ತಾರೆ. ಸಾಮಾನ್ಯವಾಗಿ, ಜೈವಿಕ ಪುರಾವೆಗಳನ್ನಾಧರಿಸಿ ಜನರನ್ನು ಗಂಡು ಅಥವಾ ಹೆಣ್ಣು ಎಂದು ತೀರ್ಮಾನಿಸಲು ಸಾಧ್ಯವಿದೆ. ಆದರೆ ಅದೇ ರೀತಿಯಲ್ಲಿ ಅವರು ಪುರುಷತ್ವದ ಅಥವಾ ಸ್ತ್ರೀತ್ವದ ಗುಣಗಳುಳ್ಳವರು ಅಥವಾ ಇಲ್ಲದವರೆಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಕಾರಣ, ಅದರ ಅಳತೆಗೋಲುಗಳು ಸಾಂಸ್ಕೃತಿಕವಾದವು; ಕಾಲದಿಂದ

ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುವಂಥವು. ಲಿಂಗದ ಸ್ಥಿರತೆಯನ್ನು ಒಪ್ಪಲೇಬೇಕು. ಅದೇ ರೀತಿ ಲಿಂಗತ್ವದ ಬದಲಾವಣೆಯ ಗುಣವನ್ನೂ ಒಪ್ಪಲೇಬೇಕು. ಲಿಂಗತ್ವಕ್ಕೆ ಯಾವುದೇ ಜೈವಿಕ ಹುಟ್ಟು ಇಲ್ಲ; ಲಿಂಗ ಮತ್ತು ಲಿಂಗತ್ವಗಳು ನಿಜವಾಗಿ 'ಸಹಜ'ವಾದುದಲ್ಲವೇ ಅಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ.

ಈ ಎರಡು ಶಬ್ದಗಳಲ್ಲಿರುವ ಮುಖ್ಯ ವ್ಯತ್ಯಾಸಗಳನ್ನು ಗಮನಿಸೋಣ:

ಲಿಂಗ (Sex)	ಲಿಂಗತ್ವ (Gender)
ಲಿಂಗ ಸಹಜವಾದುದು.	ಲಿಂಗತ್ವ ಸಾಮಾಜಿಕ, ಸಾಂಸ್ಕೃತಿಕವಾದುದು ಮತ್ತು ಮಾನವ ನಿರ್ಮಿತವಾದುದು.
ಲಿಂಗ ಜೈವಿಕವಾದುದು. ಇದು ದೃಷ್ಟಿಗೋಚರವಾದ ಜನನಾಂಗಗಳ ವ್ಯತ್ಯಾಸಗಳು ಮತ್ತು ಸಂತಾನೋತ್ಪತ್ತಿಯ ಕ್ರಿಯೆಗಳಲ್ಲಿನ ವ್ಯತ್ಯಾಸಗಳಿಗೆ ಸಂಬಂಧಿಸಿದೆ.	ಲಿಂಗತ್ವವು ಸಾಮಾಜಿಕ ಹಾಗೂ ಸಾಂಸ್ಕೃತಿಕವಾದುದು. ಇದು ಪುರುಷತ್ವದ ಮತ್ತು ಸ್ತ್ರೀತ್ವದ ಗುಣಗಳು, ವರ್ತನೆಯ ಮಾದರಿಗಳು, ಪಾತ್ರಗಳು ಮತ್ತು ಜವಾಬ್ದಾರಿಗಳು ಮುಂತಾದವುಗಳಿಗೆ ಸಂಬಂಧಿಸಿದೆ.
ಲಿಂಗ ಸ್ಥಿರವಾದುದು. ಇದು ಎಲ್ಲೆಡೆ ಒಂದೇ ಆಗಿರುತ್ತದೆ.	ಲಿಂಗತ್ವ ಬದಲಾಗುತ್ತದೆ. ಇದು ಕಾಲದಿಂದ ಕಾಲಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ, ಕುಟುಂಬದಿಂದ ಕುಟುಂಬಕ್ಕೆ ಬದಲಾಗುತ್ತದೆ.
ಲಿಂಗವನ್ನು ಬದಲಿಸಲಾಗುವುದಿಲ್ಲ.	ಲಿಂಗತ್ವವನ್ನು ಬದಲಿಸಬಹುದು.

ಲಿಂಗತ್ವ (ಅಥವಾ ಜೆಂಡರ್)ವನ್ನು ದಕ್ಷಿಣ ಏಷ್ಯಾದ ಭಾಷೆಗಳಿಗೆ ಹೇಗೆ ಭಾಷಾಂತರಿಸಬಹುದು?

ನಿಜವಾಗಿಯೂ ಇದೊಂದು ಸಮಸ್ಯೆಯೇ. ಇಂಗ್ಲಿಷ್‌ನಲ್ಲಿ ಸೆಕ್ಸ್ (Sex) ಮತ್ತು ಜೆಂಡರ್ (Gender) ಎಂಬ ಎರಡು ಪದಗಳಿವೆ. ಆದರೆ ದಕ್ಷಿಣ ಏಷ್ಯಾದ ಹೆಚ್ಚಿನ ಭಾಷೆಗಳಲ್ಲಿ ಲಿಂಗ ಮತ್ತು ಲಿಂಗತ್ವಗಳೆರಡಕ್ಕೂ 'ಲಿಂಗ' ಎಂಬ ಒಂದೇ ಪದ ದೊರಕುತ್ತದೆ. ಲಿಂಗ ಮತ್ತು ಲಿಂಗತ್ವಗಳೆರಡನ್ನೂ ಪ್ರತ್ಯೇಕವಾಗಿ ಗುರುತಿಸಲು ನಮಗೆ ಎರಡು ಪದಗಳು ಕಾಣಸಿಗುತ್ತವೆ. ಲಿಂಗಕ್ಕೆ ಪ್ರಾಕೃತಿಕ ಲಿಂಗ ಅಥವಾ ಜೈವಿಕಲಿಂಗ ಮತ್ತು ಲಿಂಗತ್ವಕ್ಕೆ 'ಸಾಮಾಜಿಕ ಲಿಂಗ' ಅಥವಾ ಸಮಾಜಕ್ಕೆ ಸಂಬಂಧಿಸಿದ ಲಿಂಗ ಎನ್ನುತ್ತೇವೆ. ವಾಸ್ತವದಲ್ಲಿ ಈ ಪರಿಭಾಷೆ "ಸೆಕ್ಸ್" ಮತ್ತು "ಜೆಂಡರ್" ಎಂಬ ಪದಗಳಿಗಿಂತ ಹೆಚ್ಚು ಸುಲಭಗ್ರಾಹ್ಯವಾಗಿದೆ. ಏಕೆಂದರೆ, ಈ ಪದಗಳೇ ತಮ್ಮ ಪರಿಭಾಷೆಗಳನ್ನು ಹೊಂದಿವೆ. ಆದ್ದರಿಂದ ಯಾವುದೇ ವಿವರಣೆಗಳ ಅತ್ಯವಿರುವುದಿಲ್ಲ.

ಆದರೆ ಲಿಂಗತ್ವವು ಲಿಂಗಕ್ಕೆ ಹೆಚ್ಚು ನಿಕಟವಾದ ಸಂಬಂಧ ಹೊಂದಿದೆಯಲ್ಲವೇ? ಮಹಿಳೆ ಮತ್ತು ಪುರುಷರ ಲಿಂಗಭೇದಗಳನ್ನಾಧರಿಸಿಯೇ ಅವರ ಪಾತ್ರ ಮತ್ತು ವರ್ತನೆಗಳನ್ನು ನಿಗದಿಪಡಿಸಲಾಗಿದೆ ಅಲ್ಲವೇ?

ಸ್ವಲ್ಪ ಮಟ್ಟಿಗೆ ಮಾತ್ರ. ತಮ್ಮ ದೇಹಗಳಿಂದಾಗಿ ಮಹಿಳೆಯರು ಮಕ್ಕಳನ್ನು ಹೆರುತ್ತಾರೆ, ಮೊಲೆಯೂಡಿಸುತ್ತಾರೆ ಮತ್ತು ಮುಟ್ಟಾಗುತ್ತಾರೆ. ಆದರೆ ಎಲ್ಲರೂ ಅಲ್ಲ. ಇದಕ್ಕಿಂತ ಬೇರೆಯಾದ ಪುರುಷರು ಮಾಡಲಾಗದುದನ್ನು ಅವರು ಮಾಡುವುದಿಲ್ಲ. ಅಥವಾ ಪುರುಷರು ಮಾಡಲು ಸಾಧ್ಯವಿರುವ ಆದರೆ ಮಹಿಳೆಯರು ಮಾಡಲಾಗದುದು ಯಾವುದೂ ಇಲ್ಲ. ಮಕ್ಕಳನ್ನು ಹೆರುವುದರ ಅರ್ಥ, ಮಹಿಳೆಯರು ಮಾತ್ರ ಅಥವಾ ಮಹಿಳೆಯರೇ ಮಕ್ಕಳನ್ನು ನೋಡಿಕೊಳ್ಳಬೇಕೆಂದಲ್ಲ. ಗಂಡು ಅಥವಾ ಹೆಣ್ಣು ದೇಹಗಳನ್ನು ಹೊಂದಿದ್ದೇವೆಂದರೆ ಅವು ನಮ್ಮ ಗುಣವಿಶೇಷಣಗಳು, ಪಾತ್ರ ಅಥವಾ ಗುರಿಗಳನ್ನು ನಿರ್ಧರಿಸಲೇಬೇಕೆಂದಿಲ್ಲ.

ಆದರೆ ವಾಸ್ತವದಲ್ಲಿ ಯಾವುದು ಸಹಜ ಮತ್ತು ಯಾವುದು ಸಮಾಜದ ನಿರ್ಮಿತಿ ಎಂದು ಹೇಳುವುದು ಬಹಳ ಕಷ್ಟಕರವಾದುದು. ಏಕೆಂದರೆ, ಮಗು ಹುಟ್ಟಿದ ಕ್ಷಣದಿಂದಲೇ ಕುಟುಂಬ ಮತ್ತು ಸಮಾಜಗಳು ಲಿಂಗತ್ವವನ್ನುಂಟು ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತವೆ. ದಕ್ಷಿಣ ಏಷ್ಯಾದ ಹಲವು ಸಂಸ್ಕೃತಿಗಳಲ್ಲಿ ಮಗನ ಜನನವನ್ನು ಆಚರಿಸಲಾಗುತ್ತದೆ; ಮಗಳ ಜನನದಿಂದ ದುಃಖಿಸಲಾಗುತ್ತದೆ. ಗಂಡು ಮಕ್ಕಳಿಗೆ ಪ್ರೀತಿ, ಗೌರವ, ಒಳ್ಳೆಯ ಆಹಾರ ಮತ್ತು ಉತ್ತಮ ವೈದ್ಯಕೀಯ ಆರೈಕೆ ಮುಂತಾದವುಗಳನ್ನು ನೀಡಲಾಗುತ್ತದೆ. ಹುಡುಗರನ್ನು ಒರಟೊರಟಾಗಿರಲು, ಖರ್ಚು ಮಾಡಲು ಪ್ರೋತ್ಸಾಹಿಸಿದರೆ, ಹುಡುಗಿಯರನ್ನು ಸೆರೆಯಲ್ಲಿಟ್ಟು

ಮನೆಗೆ ಸೀಮಿತಗೊಳ್ಳುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಹುಡುಗಿಯ ದೇಹದಲ್ಲಿ ಅವಳು ತುಂಡು ಬಟ್ಟೆ ಧರಿಸುವುದು ಅಥವಾ ಮರವನ್ನು ಹತ್ತುವುದು ಅಥವಾ ಸೈಕಲ್ಲು ತುಳಿಯುವುದನ್ನು ತಡೆಯುವಂಥದು ಏನೂ ಇಲ್ಲ. ಹಾಗೇ ಹುಡುಗನ ದೇಹದಲ್ಲಿ ಅವನು ಬೊಂಬೆಗಳೊಂದಿಗೆ ಆಡುವುದು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು, ಅಡಿಗೆ ಮಾಡಲು ನೆರವಾಗುವುದು ಅಥವಾ ಮನೆಯನ್ನು ಸ್ವಚ್ಛಗೊಳಿಸುವುದನ್ನು ತಡೆಯುವಂಥದು ಯಾವುದೂ ಇಲ್ಲ. ಈ ವ್ಯತ್ಯಾಸಗಳೆಲ್ಲವೂ ಲಿಂಗತ್ವದ ವ್ಯತ್ಯಾಸಗಳು. ಇವು ಸಮಾಜದ ನಿರ್ಮಿತಿಗಳು. ಲಿಂಗತ್ವವು ಸಾಂಸ್ಕೃತಿಕ ಮತ್ತು ಸಾಮಾಜಿಕ ಗುಣ ವಿಶೇಷಣವೇ ಹೊರತು ಸಹಜವಾದುದಲ್ಲ. ಇದು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ, ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಬದಲಾಗುತ್ತಾ ಹೋಗುವುದೇ ಇದಕ್ಕೆ ಸಾಕ್ಷಿ. ಉದಾಹರಣೆಗೆ, ಒಂದು ಮಧ್ಯಮವರ್ಗದ ಹುಡುಗಿಯನ್ನು ಮನೆ ಅಥವಾ ಶಾಲೆಗೆ ಸೀಮಿತಗೊಳಿಸಬಹುದು. ಆದರೆ ಗಿರಿಜನ ಹುಡುಗಿಯೊಬ್ಬಳು ಕಾಡಿನಲ್ಲಿ ಸ್ವತಂತ್ರವಾಗಿ ಅಲೆದಾಡಬಹುದು, ಜಾನುವಾರುಗಳನ್ನು ಮೇಯಿಸಲು ಓಡಾಡಬಹುದು ಅಥವಾ ಹಣ್ಣು, ಎಲೆ ಅಥವಾ ರೆಂಬೆಕೊಂಬೆಗಳಿಗಾಗಿ ಮರ ಹತ್ತಬಹುದು. ಇಬ್ಬರೂ ಹುಡುಗಿಯರೇ. ಆದರೆ ತಮ್ಮ ದೇಹಗಳು ಒಂದೇ ರೀತಿಯದಾದರೂ ಬೇರೆ ಬೇರೆ ಸಾಮರ್ಥ್ಯಗಳನ್ನು ಆಸೆ, ಆಕಾಂಕ್ಷೆಗಳನ್ನು ಮತ್ತು ಕನಸುಗಳನ್ನು ಬೆಳೆಸಿಕೊಳ್ಳುತ್ತಾರೆ.

ಅದೇ ರೀತಿ, ಅನೇಕ ಕುಟುಂಬಗಳಲ್ಲಿ ಸಾಂಪ್ರದಾಯಿಕವಾಗಿ ಹುಡುಗಿಯರನ್ನು ಶಾಲೆಗೆ ಕಳಿಸುತ್ತಿರಲಿಲ್ಲ. ಅವರಿಗೆ ಹತ್ತು ಅಥವಾ ಹನ್ನೊಂದು ವರ್ಷಗಳಾದ ನಂತರ ಮನೆಯ ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಮೈನೆರೆದ ಕೂಡಲೆ ಅವರಿಗೆ ವಿವಾಹವಾಗುತ್ತಿತ್ತು. ಆದರೆ ಅವೆಲ್ಲವೂ ಈಗ ಬದಲಾಗಿವೆ. ಹಾಗೆಯೇ ಪುರುಷರ ಶಿಕ್ಷಣ, ಪಾತ್ರಗಳು ಮತ್ತು ಜವಾಬ್ದಾರಿಗಳು ಬಹಳಷ್ಟು ಎನ್ನಲಾಗದಿದ್ದರೂ ಬದಲಾಗಿವೆ. ಲಿಂಗತ್ವ ಬದಲಾಗಬಹುದಾದುದೆಂದು ನಾವು ಹೇಳುವುದರ ಅರ್ಥ ಇದೇ ಆಗಿದೆ. ಅದು ಬೇರೆ ಬೇರೆ ಕುಟುಂಬಗಳಲ್ಲಿ ಅಥವಾ ಸಮುದಾಯಗಳಲ್ಲಿ ಮತ್ತು ಒಂದೇ ಕುಟುಂಬದಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯಾಗಿರುತ್ತದೆ, ಅಥವಾ ಆಗಿರಬಹುದು.

ನಾವು, ಸಮಾಜ ಅಥವಾ ಸಂಸ್ಕೃತಿಗಳು ನಮ್ಮ ದೇಹಗಳನ್ನು ಕೂಡ ರೂಪಿಸಲು ಅಥವಾ ಬದಲಿಸಲು ಸಾಧ್ಯವಿದೆ. ನಮ್ಮ ದೇಹಗಳ ಗಾತ್ರ, ರೂಪ ಮತ್ತು ಶಕ್ತಿಗಳನ್ನು ತರಬೇತಿ, ಬಳಕೆ, ನಿರ್ಬಳಕೆ, ದುರ್ಬಳಕೆ ಅಥವಾ ವಿಕೃತ ಬಳಕೆಗಳಿಂದ ಬದಲಿಸಬಹುದು. ಕಣ್ಣಿಗೆ ಕಾಣುವ ಉದಾಹರಣೆಗಳೆಂದರೆ ಕುಸ್ತಿಪಟುಗಳು, ಬಾಡಿ ಬಿಲ್ಡರ್ಸ್‌ಗಳು, ಆಟಗಾರರು, ನರ್ತಕ/ನರ್ತಕಿಯರು, ಯೋಗಪಟುಗಳು ಮುಂತಾದವರು.

ಅದೇ ರೀತಿ ಮಹಿಳೆಯರ ದೇಹಗಳು ಸಂತಾನೋತ್ಪತ್ತಿ ಮಾಡಬಲ್ಲವು. ಆದರೆ ಮಕ್ಕಳು ಬೇಕೆ, ಎಷ್ಟು ಬೇಕು ಮತ್ತು ಅವರ ನಡುವಿನ ಅಂತರ ಎಷ್ಟಿರಬೇಕು ಎನ್ನುವುದನ್ನು ನಾವೀಗ ಆಯ್ಕೆಮಾಡಲು ಸಾಧ್ಯ. ಸಂತಾನೋತ್ಪತ್ತಿ ಹೆಣ್ಣು ಪ್ರಾಣಿಗಳಿಗಿರುವಂತೆ ಮಹಿಳೆಯರಿಗೆ ಅನಿವಾರ್ಯವಲ್ಲ.

ಹೆಣ್ಣು ಮಾಡುತ್ತಾಳಾದರೆ ಅಡಿಗೆ
ಮಾಡಲು ಸಾಧ್ಯವದು ಗಂಡಿಗೆ
ಏಕೆಂದರೆ, ಮಾಡುವುದಿಲ್ಲವವಳದ
ತನ್ನ ಗರ್ಭಕೋಶದಿಂದ!

ಇದರಿಂದ ಏನನ್ನು ತಿಳಿಯಬಹುದೆಂದರೆ, ಸಮಾಜದಲ್ಲಿ ಮಹಿಳೆ ಮತ್ತು ಪುರುಷರಿಗಿರುವ ಬೇರೆಬೇರೆಯಾದ ಸ್ಥಾನಮಾನಗಳು ನಿಜವಾಗಿಯೂ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಿರ್ಧರಿತವಾದವು. ಅವು ಮಾನವ ನಿರ್ಮಿತವಾದವು. ಸ್ಥಾನಮಾನಕ್ಕೂ, ಪ್ರಕೃತಿಗೂ ಯಾವುದೇ ಸಂಬಂಧವಿಲ್ಲ. ಮಹಿಳೆಯರು ಒಂದು ಗುಂಪಾಗಿ ಎಲ್ಲೆಡೆಯೂ ಪುರುಷರಿಗಿಂತ ಕಡಿಮೆ ದರ್ಜೆಯವರನ್ನಾಗಿ ಪರಿಗಣಿಸುವಂತೆ ನಿರ್ಧರಿಸಿರುವ ಇದು ಲಿಂಗತ್ವವೇ ಹೊರತು ಲಿಂಗವಲ್ಲ. ಮಹಿಳೆಯರು ಕೆಲವೇ ಹಕ್ಕುಗಳನ್ನು ಹೊಂದಿದ್ದಾರೆ; ಕೆಲವೇ ಸಂಪನ್ಮೂಲಗಳನ್ನು ನಿಯಂತ್ರಿಸುತ್ತಾರೆ; ಹೆಚ್ಚು ಗಂಟೆಗಳ ಕಾಲ ದುಡಿಯುತ್ತಾರೆ. ಆದರೆ ಇವರ ದುಡಿಮೆಯ ಮೌಲ್ಯ ಕಡಿಮೆ ಅಥವಾ ಕಡಿಮೆ ಕೂಲಿ ದೊರಕುತ್ತದೆ. ಇವರು ಪುರುಷರು ಮತ್ತು ಸಮಾಜಗಳಿಂದ ವ್ಯವಸ್ಥಿತವಾದ ಹಿಂಸೆಗೆ ಗುರಿಯಾಗುತ್ತಾರೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇವರಿಗಿರುವುದಿಲ್ಲ.

"ಇತಿಹಾಸದಲ್ಲಿ ಯಾವ ಸಾಮಾಜಿಕ ವ್ಯವಸ್ಥೆಯೂ ನಮ್ಮಲ್ಲಿಯ ಹಾಗೆ ಕ್ರೂರವಾಗಿ, ವ್ಯವಸ್ಥಿತವಾಗಿ ಲಿಂಗಗಳ ನಡುವಿನ ಸಹಜ ವ್ಯತ್ಯಾಸಗಳನ್ನು ವಿಸ್ತರಿಸಿಲ್ಲ, ವಿರೂಪಗೊಳಿಸಿಲ್ಲ ಮತ್ತು ಬಳಕೆ ಮಾಡಿಕೊಂಡಿಲ್ಲ. ಈ ವ್ಯವಸ್ಥೆ ಮೊದಲಿಗೆ ಪ್ರಕೃತಿದತ್ತ ಲಿಂಗವನ್ನು ಸಾಮಾಜಿಕವಾದ ಕೃತಕಲಿಂಗತ್ವಕ್ಕೆ ಪರಿವರ್ತಿಸಿತು. 'ಪುರುಷ'ರನ್ನು ಪುರುಷರಿಂದ, 'ಮಹಿಳೆ'ಯರನ್ನು ಮಹಿಳೆಯರಿಂದ ಮಾಡಿಸಿತು. ವಾಸ್ತವದಲ್ಲಿ 'ಪುರುಷರನ್ನು' 'ಮಾನವ ಜನಾಂಗ'ದಿಂದ ಮತ್ತು ಮಹಿಳೆಯರನ್ನು ಕೇವಲ ಒಂದು ಲಿಂಗವನ್ನಾಗಷ್ಟೇ ಮಾಡಿತು......... ಅಂತಿಮವಾಗಿ, ಈ ವ್ಯತ್ಯಾಸಗಳನ್ನೆಲ್ಲಾ ಸೃಷ್ಟಿಸಿದ ನಂತರ ಅವರನ್ನು ಆರ್ಥಿಕ

ಶೋಷಣೆಗೊಳಗಾಗುವಂತೆ ಮಾಡಲು ಮತ್ತೆ ಅವರನ್ನು 'ಸಹಜವಾದ'ವರೆಂದು ಘೋಷಿಸುತ್ತದೆ"

ಎಂದು ಕ್ಲಾಡಿಯಾ ವೊನ್‌ವರ್‌ಲೋಫ್ ಅವರು ಅಭಿಪ್ರಾಯ ಪಡುತ್ತಾರೆ.

ಪ್ರತಿಯೊಂದು ಸಮಾಜವೂ ಹುಡುಗಿ ಮತ್ತು ಹುಡುಗರಿಗೆ, ಮಹಿಳೆ ಮತ್ತು ಪುರುಷರಿಗೆ ಬೇರೆಬೇರೆಯಾದ ಮಾನದಂಡಗಳನ್ನು ನಿಗದಿಪಡಿಸುತ್ತದೆ. ಅದು ಮಹಿಳೆ-ಪುರುಷರ, ಹುಡುಗಿ-ಹುಡುಗರ ಬದುಕಿನ ಪ್ರತಿಯೊಂದು ಮಗ್ಗುಲನ್ನು, ಮತ್ತವರ ಭವಿಷ್ಯಗಳನ್ನು ನಿರ್ಧರಿಸುತ್ತದೆ. ಅವುಗಳಲ್ಲಿ ಕಣ್ಣಿಗೆ ಕಾಣುವ ಕೆಲವನ್ನು ಗಮನಿಸೋಣ.

ಉಡುಪು

ಹೆಚ್ಚಿನ ಸಮಾಜಗಳಲ್ಲಿ ಹುಡುಗ-ಹುಡುಗಿಯರು, ಪುರುಷ-ಮಹಿಳೆಯರು ಬೇರೆಬೇರೆಯಾದ ಉಡುಪುಗಳನ್ನು ಧರಿಸುತ್ತಾರೆ. ಈ ವ್ಯತ್ಯಾಸ ಕೆಲವು ಕಡೆಗಳಲ್ಲಿ ಅತ್ಯಂತ ಕಡಿಮೆಯಿರಬಹುದು. ಇನ್ನು ಕೆಲವೆಡೆ ಅತ್ಯಂತ ಹೆಚ್ಚಾಗಿರಬಹುದು. ಕೆಲವು ಸಮುದಾಯಗಳಲ್ಲಿ ಮಹಿಳೆಯರು ತಮ್ಮ ಉಂಗುಷ್ಟದಿಂದ ನೆತ್ತಿಯವರೆಗೆ, ತಮ್ಮ ಮುಖಗಳೂ ಸೇರಿದಂತೆ ಎಲ್ಲವನ್ನೂ ಮರೆಮಾಡಿಕೊಳ್ಳಬೇಕಾಗುತ್ತದೆ. ನಾವು ಧರಿಸುವ ಉಡುಪಿನ ರೀತಿ ನಮ್ಮ ಚಲನೆ, ಸ್ವಾತಂತ್ರ್ಯ ಮತ್ತು ಮಾನವ ಘನತೆಯ ಪ್ರಜ್ಞೆಯ ಮೇಲೆ ಪ್ರಭಾವ ಬೀರಬಲ್ಲದು, ಬೀರುತ್ತದೆ.

ಗುಣಲಕ್ಷಣಗಳು

ಮಹಿಳೆಯರು ಮೃದು ಆರೈಕೆಯ, ಪೋಷಣೆಯ, ವಿಧೇಯತೆಯ, ಪರಿಪೂರ್ಣತೆಯ ಗುಣಗಳನ್ನು ಹೊಂದಿರಬೇಕೆಂದು ಹೆಚ್ಚಿನ ಸಮಾಜಗಳಲ್ಲಿ ನಿರೀಕ್ಷಿಸಲಾಗುತ್ತದೆ. ಹಾಗೆಯೇ ಪುರುಷರು ಬಲಶಾಲಿಗಳು, ಆತ್ಮವಿಶ್ವಾಸವುಳ್ಳವರು, ಸ್ಪರ್ಧಾ ಮನೋಭಾವದವರು ಹಾಗೂ ವಿವೇಚನೆಯುಳ್ಳವರಾಗಿರಬೇಕೆಂದು ನಿರೀಕ್ಷಿಸುತ್ತದೆ. ಭಾರತೀಯ ಸ್ತ್ರೀವಾದಿಯಾದ ವಸಂತ ಕಣ್ಣಾಬಿರನ್‌ರವರು ಒಮ್ಮೆ ಲಿಂಗತ್ವ ತರಬೇತಿಯೊಂದರಲ್ಲಿ ಹೀಗೆ ಹೇಳಿದ್ದರು: "ಮಹಿಳೆಯರಿಗೆ ಮಕ್ಕಳನ್ನು ಹೆರುವ ಕ್ರಿಯೆ ಎಷ್ಟು ಸಹಜವೋ ಮಕ್ಕಳನ್ನು ಪೋಷಿಸುವುದೂ ಅಷ್ಟೇ ಸಹಜವೆಂದು ಭಾವಿಸಲಾಗಿದೆ..... ಅದು ನಾವು ಹುಟ್ಟಿಸುವ ಮಕ್ಕಳಿಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿಲ್ಲ. ಪ್ರೀತಿ ಮತ್ತು ತಾಯ್ತನಗಳು ಅವುಗಳ ಅಗತ್ಯವಿರುವ ಯಾವುದೇ ವ್ಯಕ್ತಿಯ ಕಡೆ ನದಿಯಂತೆ ಹರಿಯಲು ನನ್ನೊಳಗೆ ಕಾಯುತ್ತಾ ಕುಳಿತಿದೆಯೆಂದು ಭಾವಿಸಲಾಗಿದೆ. ನಾವು ತಾಯಂದಿರಾಗಿ ನಿರಂತರವೂ ಇದ್ದುಬಿಡುತ್ತೇವೆ. ಅದರಿಂದಲೇ ನಾನು ನನ್ನ ಮಗುವನ್ನು, ಬೇರೆಯವರ ಮಕ್ಕಳನ್ನು, ನನ್ನ ಗಂಡ, ಸೋದರ-ಸೋದರಿಯರನ್ನು, 'ನನ್ನ ಪುಟ್ಟತಾಯಿ' ಎಂದೇ ಸಂಬೋಧಿಸುವ ನನ್ನ ತಂದೆಯನ್ನು ತಾಯಿಯಂತೆ ನೋಡಿಕೊಳ್ಳುತ್ತೇನೆ! ವಿಸ್ತೃತಗೊಳ್ಳುತ್ತಾ ಪ್ರತಿಯೊಬ್ಬರಿಗೂ ನಾನು ತಾಯಿಯಾಗಿ ಬಿಡುತ್ತೇನೆ. ಇಡೀ ವಿಶ್ವದ ಬಗ್ಗೆ ನಿಮ್ಮಲ್ಲಿ ತಾಯಿಯ ಭಾವನೆಗಳು ಉಕ್ಕಿಹರಿಯುವುದನ್ನು ನಿರೀಕ್ಷಿಸಲಾಗುತ್ತದೆ. ಇದು ಸಹಜವೆಂದು ಭಾವಿಸಲಾಗುತ್ತದೆ! ಕ್ರಿಯೆ ಎಂದು ಅಲ್ಲವೇ ಅಲ್ಲ. ಇದು ನೀವು ಉಸಿರಾಡುವ ಹಾಗೆ, ತಿನ್ನುವ ಹಾಗೆ ಅಥವಾ ನಿದ್ರಿಸುವ ಹಾಗೆ ಸುಲಭವಾಗಿ ಮಾಡುವಂತಹದು."

ಪಾತ್ರಗಳು ಮತ್ತು ಜವಾಬ್ದಾರಿಗಳು

ಪುರುಷರನ್ನು ಕುಟುಂಬಗಳ ಮುಖ್ಯಸ್ಥರು, ಅನ್ನವನ್ನು ಸಂಪಾದಿಸುವವರು, ಆಸ್ತಿಯ ಒಡೆಯರು ಮತ್ತು ನಿರ್ವಾಹಕರು ಮತ್ತು ರಾಜಕೀಯ, ಧರ್ಮ, ವ್ಯಾಪಾರ ಮತ್ತು ವೃತ್ತಿಗಳಲ್ಲಿ ಕ್ರಿಯಾಶೀಲರು ಎಂದು ಪರಿಗಣಿಸಲಾಗುತ್ತದೆ. ಇನ್ನೊಂದು ಕಡೆ, ಮಹಿಳೆಯರಿಂದ ಮಕ್ಕಳನ್ನು ಹೆರುವ, ಪೋಷಿಸುವ, ರೋಗಿಗಳು ಮತ್ತು ವೃದ್ಧರ ಆರೈಕೆ ಮಾಡುವ ಮತ್ತು ಗೃಹಕೃತ್ಯಗಳೆಲ್ಲವನ್ನೂ ಮಾಡುವುದನ್ನು ನಿರೀಕ್ಷಿಸಲಾಗುತ್ತದೆ ಮತ್ತು ಅವರಿಗೆ ತರಬೇತಿಯನ್ನೂ ನೀಡಲಾಗುತ್ತದೆ. ಇದು ಅವರಿಗೆ ಶಿಕ್ಷಣ ಸಿಗುವುದು ಅಥವಾ ಸಿಗದಿರುವುದು, ಉದ್ಯೋಗಕ್ಕೆ ಸಿದ್ಧತೆ, ಅದರ ಸ್ವರೂಪ/ಮಾದರಿ ಮುಂತಾದವುಗಳನ್ನೂ ನಿರ್ಧರಿಸುತ್ತದೆ. ಹೆಣ್ಣು ಮತ್ತು ಗಂಡುಗಳ ಪಾತ್ರಗಳ ನಡುವಿನ ವ್ಯತ್ಯಾಸಗಳ ಮಟ್ಟ ಮಾತ್ರ ವ್ಯಾಪಕ ವಿಭಿನ್ನತೆಯನ್ನು ಹೊಂದಿರುತ್ತದೆ. ಕೆಲವೊಮ್ಮೆ ಈ ನಿಯಮಗಳು ಕೇವಲ ಆದ್ಯತೆಯ ವಿಷಯವಾಗಿರುತ್ತದೆ. ಪಾತ್ರಗಳು ತಾತ್ಕಾಲಿಕವಾಗಿ ತಿರುಗುಮುರುಗಾದಾಗ ಎರಡೂ ಲಿಂಗಗಳಿಂದ ಯಾವುದೇ ಆತಂಕ ವ್ಯಕ್ತವಾಗುವುದಿಲ್ಲ.

ಕೊರಾ ಡು ಬೋಯ್ಸ್ ಅವರ ವರದಿಯ ಪ್ರಕಾರ, "ಅಲೋರ್‌ನಲ್ಲಿ ಎರಡು ಲಿಂಗಗಳ ಆರ್ಥಿಕ ಪಾತ್ರಗಳ ನಡುವೆ ವ್ಯತ್ಯಾಸಗಳಿದ್ದರೂ ಒಬ್ಬರು ಇನ್ನೊಂದು ಲಿಂಗಿಯ ಕೆಲಸವನ್ನು ಮಾಡುವುದು ಅನಾರೋಗ್ಯಕರವಾದುದೆಂದು ಭಾವಿಸಲಾಗುವುದಿಲ್ಲ. ಬದಲಾಗಿ, ಮತ್ತಷ್ಟು ಪೂರಕ ಕೌಶಲವುಳ್ಳವರೆಂದು ಅವರನ್ನು ಪ್ರಶಂಸಿಸಲಾಗುತ್ತದೆ. ಮಹಿಳೆಯರು ಜೀವನ ನಿರ್ವಹಣೆಯ ಆರ್ಥಿಕತೆಯನ್ನು ನಿಯಂತ್ರಿಸಿದರೆ ಪುರುಷರು ಹಣಕಾಸಿನ ವ್ಯವಹಾರಗಳಲ್ಲಿ ಸ್ಥಾನವನ್ನು ತಮಗೆ ತಾವೇ ಪಡೆದುಕೊಂಡಿರುತ್ತಾರೆ. ಪುರುಷರಲ್ಲನೇಕರು ಮಹತ್ವಾಕಾಂಕ್ಷೆಯ ತೋಟಗಾರರು. ಅನೇಕ ಮಹಿಳೆಯರು ಹಣಕಾಸಿನ ವ್ಯವಹಾರ ಕುಶಲರು. ಇನ್ನೊಂದೆಡೆ, ತೋಟಗಾರಿಕೆಯು ಮಹಿಳೆಯರ ವೃತ್ತಿ ಎನ್ನುವ ಪರಿಭಾಷೆ ಇರುವ ಕೆಲವು ಸಂಸ್ಕೃತಿಗಳಲ್ಲಿ ತೋಟಗಾರಿಕೆಯಲ್ಲಿ ಸಹಜ ಆಸಕ್ತಿ ಹೊಂದಿರುವ ಪುರುಷರಲ್ಲಿ ಅದನ್ನು ಲೈಂಗಿಕ ಅತಿಕ್ರಮಕ್ಕೆ

(deviation) ಪುರಾವೆಯೆಂದು ಭಾವಿಸಲಾಗುತ್ತದೆ. ಮತ್ತೆ ಕೆಲವು ಕಡೆ, ಎರಡೂ ಲಿಂಗಿಗಳಿಗೆ ವಹಿಸಿರುವ ವೃತ್ತಿಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ಮಹಿಳೆಯರಿಗೆ ಒಂದು ವಿಶೇಷ ವರ್ಗವನ್ನೂ ಸೃಷ್ಟಿಸಬಹುದು". (ಆ್ಯನ್ ಓಕ್ಲೆ: Sex, Gender and society, P. 16) "ಕೆಲವು ಸಮಾಜಗಳಲ್ಲಿ ಕಟ್ಟುನಿಟ್ಟಾದ ಲಿಂಗ ಸಂಬಂಧೀ ಪಾತ್ರಗಳನ್ನು ಹೇರುತ್ತವೆ. ಸೆಂಟ್ರಲ್ ಬ್ರೆಜಿಲ್‌ನ ಮುಂಡುರುಕು ಭಾರತೀಯರು, ಲಿಂಗ ಸಂಬಂಧಿತ ಪಾತ್ರಗಳು ಮತ್ತು ಗುಂಪುಗಳು ಧ್ರುವೀಕರಣ ಗೊಂಡಿರುವ ಸಮಾಜವೊಂದಕ್ಕೆ ಉತ್ತಮ ಉದಾಹರಣೆ ಯಾಗಿದ್ದಾರೆಂದು" ಆ್ಯನ್ ಓಕ್ಲೆ ಹೇಳುತ್ತಾರೆ. "ಏಕೆಂದರೆ ಇಲ್ಲಿ ಎರಡು ಲಿಂಗಿಗಳ ದೈಹಿಕ ಮತ್ತು ಸಾಮಾಜಿಕ ಪ್ರತ್ಯೇಕತೆ ಅಕ್ಷರಶಃ ಸಂಪೂರ್ಣವಾಗಿದೆ. ಪುರುಷರು ಮತ್ತು ಹುಡುಗರು ಪ್ರತ್ಯೇಕ ಮನೆಗಳಲ್ಲಿ ವಾಸಿಸುತ್ತಾರೆ. ಪ್ರತಿಯೊಂದು (ಲಿಂಗಿಗಳ) ಗುಂಪು (ಚಿಕ್ಕಮಕ್ಕಳನ್ನು ಹೊರತು ಪಡಿಸಿ) ತನ್ನೊಳಗೇ ಪರಸ್ಪರ ಪ್ರತಿಕ್ರಿಯೆಗಳಲ್ಲಿ ತೊಡಗಿರುತ್ತದೆ. ಎರಡು ಗುಂಪುಗಳ (ಹೆಣ್ಣು ಗಂಡುಗಳ) ನಡುವಿನ ವಿರೋಧವನ್ನು ಹಲವು ಧಾರ್ಮಿಕ ಆಚರಣೆ ಗಳು, ಮತ್ತಿತರ ಸಂದರ್ಭಗಳಲ್ಲಿ ವ್ಯಕ್ತಪಡಿಸಲಾಗುತ್ತದೆ. ಈ ಲೈಂಗಿಕವಾದ ವಿರುದ್ಧ ಪ್ರವೃತ್ತಿಗಳ ಸ್ಥಿತಿ (polarity)ಯು ಆರ್ಥಿಕ ಜವಾಬ್ದಾರಿಗಳು ಮತ್ತು ಸಾಮಾಜಿಕ ಪಾತ್ರಗಳನ್ನೊಳಗೊಳ್ಳುವುದಲ್ಲದೆ ವ್ಯಕ್ತಿತ್ವದ ಪರಿಧಿಯಲ್ಲಿ ಅಧಿಕಾರ ಪ್ರಾಬಲ್ಯ ಮತ್ತು ಅಧೀನತೆಗಳ ಸಂಬಂಧದ ರೂಪವನ್ನು ಪಡೆದುಕೊಳ್ಳುತ್ತದೆ. ಸಮಾಜ ವಿಧಿಸಿದ ಲಿಂಗ ಸಂಬಂಧಿತ ಪಾತ್ರಗಳಲ್ಲಿ ಉಳಿದು ಬಿಡುವ ಜನರ ಸಾಮರ್ಥ್ಯ ಮತ್ತು ವ್ಯಕ್ತಿತ್ವ ಮಾದರಿಗಳು ಹಾಗೂ ವಾಸ್ತವಿಕ ಮತ್ತು ಕಾಲ್ಪನಿಕ ಆಸೆ ಆಕಾಂಕ್ಷೆಗಳನ್ನು ಹೊಂದಿರುವ ಜನರ ಸಾಮರ್ಥ್ಯದ ಬಗೆಗಿನ ಆತಂಕವು ಜನಪದದ ಹಲವು ತುಣುಕುಗಳಲ್ಲಿ ಮತ್ತು ಧಾರ್ಮಿಕ ಆಚರಣೆಗಳಲ್ಲಿ ವ್ಯಕ್ತವಾಗಿದೆ"(ಆ್ಯನ್ ಓಕ್ಲೆ: ಪು. 149–50)".

ಹೊರಗಿನಿಂದ ನೋಡುವವರಿಗೆ ಪಾಶ್ಚಾತ್ಯ ಸಮಾಜಗಳು ಅತ್ಯಂತ ಕಡಿಮೆ ಪ್ರಮಾಣದ ಲಿಂಗತಾರತಮ್ಯವನ್ನು ಹೊಂದಿರುವಂತೆ ಭಾಸವಾಗುತ್ತದೆ. ಆದರೆ "ಇಂದಿನ ಪಾಶ್ಚಾತ್ಯ ಸಮಾಜಗಳಲ್ಲಿ ಲಿಂಗವು ಸಾಮಾಜಿಕ ಸಂರಚನೆಯ ಒಂದು ಸಂಘಟನಾತ್ಮಕ ತತ್ವವಾಗಿದೆ. ಜನಸಾಮಾನ್ಯರ ನಂಬಿಕೆ ಇದಕ್ಕೆ ವಿರುದ್ಧವಾಗಿದ್ದರೂ ಇದು ಸಾಮಾಜಿಕ ಪಾತ್ರಗಳನ್ನು ನಿರ್ಧರಿಸು ವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮುಂಡುರುಕು ಭಾರತೀಯರಲ್ಲಿರುವಂತೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಹೆಚ್ಚಿನ ಆತಂಕದ ಬೇರುಗಳು ಲಿಂಗತ್ವದ ಪಾತ್ರಗಳಿಂದಾಗಿ ಹುಟ್ಟುವ ಬೇಡಿಕೆಗಳಲ್ಲಿವೆಯೆಂದರೆ ಅಚ್ಚರಿಪಡಬೇಕಾಗಿಲ್ಲ. ಮನೋವೈದ್ಯರ ಪ್ರಕಾರ ನಮ್ಮ ಸುರಕ್ಷಿತತೆಯ ಹೆಚ್ಚಿನ ಪಾಲು ಈ ಪಾತ್ರಗಳ ಮಿತಿಯಲ್ಲಿರುವುದರಿಂದ ದೊರೆಯುತ್ತದೆ. ಒಂದು ವೇಳೆ ನಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರೆ ನಾವು ಆ ಮಿತಿಯೊಳಗಿರಲೇಬೇಕು. (ಓಕ್ಲೆ: ಪು. 150)

(ಮುಂದುವರಿಯುವುದು)

ದಿನಾಂಕ 1–4–07ರಂದು ಮಾನಸ ವೇದಿಕೆಯು ಏರ್ಪಡಿಸಿದ ಪುಟ್ಟ ಸಭೆಯಲ್ಲಿ ಕವಯಿತ್ರಿಯರಾದ ಪಿ. ಚಂದ್ರಿಕಾ ಹಾಗೂ ತಾಜುಮಾ ಸ್ವರಚಿತ ಕವನಗಳನ್ನು ಓದಿದರು.

"ಪದ್ಯ ಬರೆಯುವುದು ಸೇಫ್. ಏಕೆಂದರೆ ಇಲ್ಲಿ ಎಲ್ಲವನ್ನು ಇಮೇಜ್ ಮೂಲಕ ಹೇಳುತ್ತೇವೆ. ಕಥೆಗಳನ್ನು ಬರೆಯುವಾಗ ಕೆಲವೊಮ್ಮೆ ವ್ಯಕ್ತಿಗಳೊಡನೆ ಸಂಘರ್ಷಕ್ಕೆ ಇಳಿಯಬೇಕಾದ ಅನಿವಾರ್ಯತೆ ಕಂಡಬರುವುದರಿಂದ ಪದ್ಯ ಬರೆಯುವುದು ಸೇಫ್ ಎನಿಸಿ ಪದ್ಯದ ಮೂಲಕ ಅಭಿವ್ಯಕ್ತಿ ಕಂಡುಕೊಳ್ಳುತ್ತೇನೆ" ಎನ್ನುತ್ತಾರೆ ಚಂದ್ರಿಕಾ.

"ನನ್ನೊಳಗೆ ಏನೋ ಒಂದು ತಹತಹವಿತ್ತು. ಅದನ್ನು ಅಭಿವ್ಯಕ್ತಿಸಲು ಸಾಧ್ಯವಾಗುತ್ತಿರಲಿಲ್ಲ. ಕುಟುಂಬದ ನಾಲ್ಕು ಗೋಡೆಗಳಲ್ಲಿ ಕಳೆದುಹೋಗುತ್ತಿದ್ದ ನನ್ನೊಳಗಿನ ಹುಡುಕಾಟವೇ ನಾನು ಬರೆದ ಪದ್ಯಗಳು" ಎನ್ನುತ್ತಾರೆ ತಾಜುಮಾ. ಕೋಮುವಾದದ ತೀವ್ರತೆ ಅವರಲ್ಲಿ ಆತಂಕದ ಗೂಡು ಕಟ್ಟುತ್ತದೆ.

ಕನ್ನಡ ಸಾಹಿತ್ಯದ ವಿಸ್ಮಯ ಲೋಕದ ವಿಸ್ಮಯ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಅವರ ನಿಧನಕ್ಕೆ ನಮ್ಮ ಮಾನಸ ಶ್ರದ್ಧಾಂಜಲಿ ಅರ್ಪಿಸುತ್ತದೆ.

"ಜನರ ಪ್ರೀತಿ ನನ್ನನ್ನು ಕಾಪಾಡಿದೆ" ಹಸೀನಾ

ಎಚ್.ಎಸ್. ಪುಷ್ಪ, ಎಚ್.ಎಸ್. ರಾಜೇಶ್ವರಿ

ವಿಶಾಲವಾದ, ಚೊಕ್ಕಟವಾದ ಮನೆ. ಗೋಡೆಯ ಮೇಲೆ ಹಸೀನಾಳ ಕೈಯ ಕುಶಲತೆಯಿಂದ ಮೂಡಿದ ಕಲಾಕೃತಿಗಳು ಕಾಣುತ್ತಿವೆ. ಇಂಥ ಸುಂದರವಾದ ಬದುಕು ಹೀಗೆ ನಾಶವಾಗ ಬಹುದೆಂದು ಯಾರೂ ಭಾವಿಸಿರಲಿಲ್ಲ.

ಹಸೀನಾ ಮನೆಗೆ ಕಾಲಿಡುತ್ತಲೇ ಒಂದು ವಿಧವಾದ ವಿಷಣ್ಣತೆ ಮನಸ್ಸನ್ನು ತುಂಬಿಕೊಳ್ಳುತ್ತದೆ. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಬಂದ ನಮ್ಮನ್ನು ಹಸೀನಾಳ ತಾಯಿ ಒಳಗೆ ಕರೆದು, ಕುಡಿಯಲು ತಣ್ಣಗಿನ ನೀರನ್ನು ಕೊಟ್ಟರು. ನೆತ್ತಿ ಸುಡುವ ಬಿಸಿಲು, ಕಣ್ಣಿಗೆ ಕುಕ್ಕುವ ಬೆಳಕು. ಆದರೆ ಬಾಳಲ್ಲಿ ಕತ್ತಲು ತುಂಬಿ ಏಳು ವರ್ಷಗಳೇ ಕಳೆದಿವೆ.

ಹೇಗೆ ಮಾತು ಪ್ರಾರಂಭಿಸುವುದು, ಮಾಂಸದ ಮುದ್ದೆಯಾದ ಹಸೀನಾ ಕಪ್ಪು ಕನ್ನಡಕ ಧರಿಸಿ ಮೆಲ್ಲಗೆ ಮಂಚದಿಂದ ಇಳಿಯ ಲೆತ್ನಿಸುತ್ತಾಳೆ. ತಾಯಿ ಕೈ ಹಿಡಿದು ಒಳಗೆ ಕರೆದುಕೊಂಡು ಹೋಗುತ್ತಾರೆ. ಆಕೆಯನ್ನು ನೋಡಿದ ತಕ್ಷಣ ಮಾತುಗಳು ಗಂಟಲಲ್ಲೇ ಉಳಿಯುತ್ತವೆ.

ನೀಳ ಕೇಶರಾಶಿಯ ಹಸೀನಾಳ ಮುಂದಲೆಯಲ್ಲಿ ಕೂದಲಿಲ್ಲ. ಹಿಂಬದಿಯಲ್ಲಿ ಉಳಿದಿರುವ ನೀಳ ಕೂದಲನ್ನು ಮುಂದೆ ತಂದು ಬಾಚಿದ್ದಾಳೆ. ಕಿವಿ ಕರಗಿ ಹೋಗಿದೆ. ಕರಗಿದ ಮೂಗಿಗೆ ಸರ್ಜರಿ ಮಾಡಿದ್ದಾರೆ. ದೇಹವೆಲ್ಲಾ ಮೇಣದಂತೆ ಕರಗಿ ಹೋಗಿದೆ.

ಹಸೀನಾ ಎಂದರೆ ಸುಂದರಿ ಎಂದರ್ಥ. ಇದೆಂತಹ ಬದುಕಿನ ವ್ಯಂಗ್ಯ. ಸಹಜವಾಗಿ ಪಡೆದುದಾದರೆ ಒಂದು ರೀತಿಯ ಸಮಾಧಾನ ವಿರುತ್ತಿತ್ತು. ಆದರೆ ಇದು ಪುರುಷ ಪ್ರಧಾನ ಸಮಾಜದ ಕ್ರೌರ್ಯದ ಪರಮಾವಧಿಯ, ವಿಕೃತಿಯ ಸಂಕೇತ.

ಹಸೀನಾ ಹುಸೇನ್ ಸಾಹೇಬರ ಮೊದಲನೆಯ ಮಗಳು. ಇಬ್ಬರು ಹೆಣ್ಣುಮಕ್ಕಳ ಸುಂದರ ಕುಟುಂಬ. ಮುಸ್ಲಿಂ ಸಮುದಾಯದ ಸಂಪ್ರದಾಯದ ನಂಬಿಕೆಗಳನ್ನು ಮೀರಿ ಇಬ್ಬರು ಹೆಣ್ಣು ಮಕ್ಕಳನ್ನು ಚೆನ್ನಾಗಿ ಓದಿಸಿದರು. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯನ್ನು ಸುಲಲಿತವಾಗಿ ಮಾತನಾಡಬಲ್ಲ ಹಸೀನಾ ಕುಶಲಕಲೆ ಯಲ್ಲೂ ಪರಿಣತಿಯನ್ನು ಪಡೆದವಳು. ಅವಳ ಕೈಯಲ್ಲಿ ಮೂಡಿದ ನವಿಲು ಗೋಡೆಯ ಮೇಲೆ ರೆಕ್ಕೆ ಬಿಚ್ಚಿ ಕುಣಿಯುತ್ತದೆ. ಎಂತಹ ವಿಪರ್ಯಾಸ? ಮಾಂಸದ ಮುದ್ದೆಯಾದ ಹಸೀನಾ ನಾಲ್ಕು ಗೋಡೆಯ ಮಧ್ಯೆ ಬೆಳಕನ್ನೂ ಕಾಣದೆ ಮಂಚದ ಮೂಲೆಯಲ್ಲಿ ಕಿವಿಯನ್ನೇ ಬದುಕನ್ನಾಗಿಸಿ ಕೊಂಡಿದ್ದಾಳೆ.

"ನಮ್ಮ ಸಮುದಾಯದಲ್ಲಿ ಹೆಣ್ಣುಮಕ್ಕಳು ಕಿಚನ್‌ನಲ್ಲಿ ಹುಟ್ಟಬೇಕು, ಕಿಚನ್‌ನಲ್ಲೆ ಸಾಯಬೇಕು. ಆದರೆ ನಮ್ಮ ತಂದೆ ತಾಯಿ ನಮಗೆ ವಿದ್ಯಾಭ್ಯಾಸ ಕೊಡಿಸಿದರು." ಮೆಲ್ಲಗೆ ನುಡಿಯುತ್ತಾಳೆ ಹಸೀನಾ.

ಇಪ್ಪತ್ತು ವರ್ಷದ ಸುಂದರ ಯುವತಿ ಹಸೀನಾ. ಕಂಪ್ಯೂಟರ್ ಕೋರ್ಸ್ ಮುಗಿಸಿ ನೇಹಾ ಕಂಪ್ಯೂಟರ್ಸ್‌ನಲ್ಲಿ ಕೆಲಸಕ್ಕೆ ಸೇರುತ್ತಾಳೆ. ಜೋಸೆಫ್ ರೋಡ್ರಿಗ್ಸ್ ಇದರ ಮಾಲೀಕ. ಆದರೆ ಒಂದು ವರ್ಷದ ಈ ಕಂಪ್ಯೂಟರ್ ಸೆಂಟರ್ ನಷ್ಟದಲ್ಲಿ ನಡೆಯುತ್ತಿದ್ದ ಕಾರಣ ಈಕೆ ಈ ಕೆಲಸವನ್ನು ಬಿಟ್ಟು ಸತೀಶ್‌ಇಂಡಸ್ಟ್ರಿಗೆ ಸೇರುತ್ತಾಳೆ. ಆದರೆ ರೋಡ್ರಿಗ್ಸ್ ಹಸೀನಾಳನ್ನು ಕೆಲಸ ಬಿಡದಂತೆ ಒತ್ತಾಯಿಸುತ್ತಾ, ತನ್ನ ಮನೆಗೆ ಬಂದು ಕೆಲಸ ಮಾಡಬೇಕೆಂದು ಒತ್ತಡ ಹೇರುತ್ತಾನೆ. ಆಕೆ ಒಪ್ಪದಿದ್ದಾಗ, ನೀನು ಇದರ ಕೆಟ್ಟ ಪರಿಣಾಮವನ್ನು ಎದುರಿಸ ಬೇಕಾಗುತ್ತದೆಯೆಂದು ಹೆದರಿಸುತ್ತಾನೆ.

ದಿನಾಂಕ 20-04-1990ರಂದು ಬೆಳಿಗ್ಗೆ 8-00 ಗಂಟೆಗೆ ಹಸೀನಾ ಕೆಲಸಕ್ಕೆ ಹೋಗಲು ಮನೆ ಬಿಡುತ್ತಾಳೆ. ಅದೇ ದಾರಿಯಲ್ಲಿ ಹೋಗುತ್ತಿದ್ದ ಕೃಷ್ಣ ಎಂಬ ನೆರೆಯ ಮನೆಯವರು ತಮ್ಮ ವಾಹನ ದಲ್ಲಿ ಹಸೀನಾಳನ್ನು ಅವಳ ಕಛೇರಿಯ ಗೇಟ್ ಬಳಿ ಬಿಡುತ್ತಾರೆ. ಸುಮಾರು 8-25ಕ್ಕೆ ಜೋಸೆಫ್ ರೋಡ್ರಿಗ್ಸ್ ಮೋಟಾರ್ ಬೈಕ್‌ನಲ್ಲಿ ಬಂದು, ಪ್ಲಾಸ್ಟಿಕ್ ಮಗ್ ಒಂದರಲ್ಲಿದ್ದ ಆ್ಯಸಿಡ್‌ಅನ್ನು ಆಕೆಯ ಮೇಲೆ ಸುರಿಯುತ್ತಾನೆ. ದೇಹವೆ ಕರಗಿ ಹೋಗುತ್ತದೆ. ಸುತ್ತಮುತ್ತ ಇರುವ ಜನರೆಲ್ಲ ಸೇರುತ್ತಾರೆ. ಹಸೀನಾ ನೀರು ನೀರು ಎಂದು ಚೀರ ತೊಡಗುತ್ತಾಳೆ. ಆದರೆ ಅಲ್ಲಿ ನೆರೆದಿರುವವರಿಗೆ ಆಕೆಗೆ ನೀರು ಕೊಡಬೇಕೆ ಬೇಡವೆ ಎಂಬ ಗೊಂದಲ. ಒಬ್ಬೊಬ್ಬರು ಒಂದೊಂದು ರೀತಿಯ ಸಲಹೆ ನೀಡುತ್ತಾರೆ. ಕೆಲವರು ಆಕೆಗೆ ನೀರು ಕೊಟ್ಟರೆ, ಆಕೆ ಸತ್ತು ಹೋದರೆ ತಮ್ಮ ಮೇಲೆ ಎಲ್ಲಿ ಬರುತ್ತದೆಯೋ ಎಂಬ ಅನುಮಾನದಿಂದ ಹಿಂದೆ ಸರಿದರು. ಯಾರೋ ಪುಣ್ಯಾತ್ಮ ಬಂದು ಒಂದು ಪುಟ್ಟ ಗ್ಲಾಸಿನಲ್ಲಿ ನೀರುಕೊಟ್ಟ, ಹಸೀನಾ ಆ ನೀರನ್ನು ಕುಡಿದು ಉಗಿದಳು. ಅವಳ ಅದೃಷ್ಟ ಅವಳ ನಾಲಿಗೆ ಉಳಿಯಿತು. ಮಾತೇ ಅವಳ ಜೀವದುಸಿರಾಯಿತು. ಆ ಕ್ಷಣ ಗುಟುಕು ನೀರೂ ಸಿಗದಿದ್ದರೆ ನಾಲಿಗೆಯೂ ಉದುರಿ ಹೋಗುತ್ತಿತ್ತೆಂದು ನಿಟ್ಟುಸಿರು ಬಿಡುತ್ತಾಳೆ.

ಮಹಿಳೆಯೊಬ್ಬರು ಆಕೆಯನ್ನು ಹೆಚ್.ಎಂ.ಟಿ. ಆಸ್ಪತ್ರೆಗೆ ಸೇರಿಸುತ್ತಾರೆ. ನಂತರ ಆಕೆಯನ್ನು ರಾಮಯ್ಯ ಆಸ್ಪತ್ರೆಗೆ ಸೇರಿಸ ಲಾಗುತ್ತದೆ. ತಂದೆ ಬಹುದೂರದ ಬಿಹಾರ್‌ನಲ್ಲಿದ್ದರು. ಒಂದೆರಡು ದಿನದಲ್ಲಿ ದುಡ್ಡು ಕಟ್ಟುತ್ತೇವೆಂದು ತಾಯಿ ಎಷ್ಟು ಬೇಡಿಕೊಂಡರೂ ಚಿಕಿತ್ಸೆ ಸಿಗುವುದಿಲ್ಲ. ಅಲ್ಲಿಂದ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು. ಅಲ್ಲಿಯೂ ಸರಿಯಾದ ಚಿಕಿತ್ಸೆ ದೊರೆಯದೆ ಕೊನೆಗೆ ಸೇಂಟ್‌ಜಾನ್ಸ್ ಆಸ್ಪತ್ರೆ ಸೇರಿಸಲಾಗುತ್ತದೆ. "ಸಕಾಲದಲ್ಲಿ ನನಗೆ ಸೂಕ್ತವಾದ ಚಿಕಿತ್ಸೆ ದೊರೆತಿದ್ದರೆ ನನ್ನ ಕಣ್ಣುಗಳಾದ್ರು ಉಳಿಯುತ್ತಿದ್ದವು" ಹಸೀನಾ ನಿಡುಸುಯ್ದಳು.

ತಲೆಯ ಮೇಲೆ ಆ್ಯಸಿಡ್ ಸುರಿದಿರುವುದರಿಂದ ತಲೆಯಿಂದ ಕಾಲಿನ ವರೆಗೆ ದೇಹ ಕರಗಿ ಮುರುಟಿ ಹೋಗಿದೆ. ಈಗ ದೇಹ ಎಷ್ಟು ಸೂಕ್ಷ್ಮ ಆಗಿದೆಯೆಂದರೆ ಫ್ಯಾನ್ ಹಾಕಿದರೆ ಚಳಿಯೆನಿಸುತ್ತದೆ. ಹೊರಗಡೆ ಹೋದರೆ ಬಿಸಿಲನ್ನು ತಡೆಯುವ ಶಕ್ತಿ ದೇಹಕ್ಕಿಲ್ಲ. ಏಳು ವರ್ಷಗಳಿಂದ ಕೋರ್ಟಿಗೆ ಹೋಗಿ ಬರುವುದನ್ನು ಬಿಟ್ಟರೆ ಏಳದಂತೆ ಹಾಸಿಗೆಯ ಮೇಲೆ ಜೀವನ. ಎಲ್ಲಿಗೆ ಹೋಗ ಬೇಕಾದರೂ ತಂದೆ ರಜಾ ಹಾಕಿ ಕರೆದುಕೊಂಡು ಹೋಗಬೇಕು ಅಥವಾ ತಾಯಿ ಕರೆದುಕೊಂಡು ಹೋಗಬೇಕು. ತಾಯಿಗೂ ಆರೋಗ್ಯ ಇಲ್ಲ.

ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಎಂಟು ತಿಂಗಳು ಕಾಲ ಐ.ಸಿ.ಯು.ನಲ್ಲಿ ಆಕೆಯನ್ನು ಇಡಲಾಗಿತ್ತು. ಚಿಕಿತ್ಸೆಗಾಗಿ ಲಕ್ಷಾಂತರ ರೂಪಾಯಿಗಳನ್ನು ತಂದೆ ಖರ್ಚು ಮಾಡಿದರು. ಸ್ವಂತ ಮನೆಯನ್ನು ಚಿಕಿತ್ಸೆಯ ವೆಚ್ಚಕ್ಕಾಗಿ ಮಾರಾಟ ಮಾಡಿದರು. ಸಾಕಷ್ಟು ಜನರು ಮಾನವೀಯತೆಯಿಂದ ಆರ್ಥಿಕವಾಗಿ ನೆರವಾದರು. "ಮನೆಗೆ ಕರೆದುಕೊಂಡು ಬಂದ ಮೇಲೆ ಆಕೆಯನ್ನು ಬಾಳೆ ಎಲೆಮೇಲೆ ಮಲಗಿಸುತ್ತಿದ್ದೆವು. ಮೈಮೇಲಿನ ಚರ್ಮ ಸುಲಿದು ಬರುತ್ತಿತ್ತು." ತಾಯಿ ನೆನಪು ಮಾಡಿಕೊಂಡು ನಿಟ್ಟುಸಿರು ಬಿಡುತ್ತಾರೆ.

"ಆಕೆಯ ಭವಿಷ್ಯದ ಬಗ್ಗೆಯೇ ನನಗೆ ದೊಡ್ಡ ಚಿಂತೆಯಾಗಿದೆ" ಹುಸೇನ್ ಸಾಹೇಬರು ಮಾತು ಮುಂದುವರೆಸುತ್ತಾರೆ. "ಆಕೆಯ ಮೇಲೆ ನಡೆದ ಈ ಹಿಂಸೆಯಿಂದಾಗಿ ನಮ್ಮ ಕುಟುಂಬವೇ ನಾಶವಾಯಿತು. ಬದುಕಿಗಿಂತ ಸಾವೇ ಲೇಸು ಅನ್ನುವಷ್ಟು ಮನಸ್ಸಿಗೆ ಆಘಾತವಾಗಿದೆ. ಅವಳ ಕಣ್ಣುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿದ್ದರೆ ಇಷ್ಟು ಚಿಂತಿಸುತ್ತಿರಲಿಲ್ಲ. ಅವಳ ದೃಷ್ಟಿಗಾಗಿ ಅಮೃತಸರಕ್ಕೆ ಹೋಗಿಬಂದೆವು. ಸಾಕಷ್ಟು ಹಣ ಖರ್ಚು ಮಾಡಿದೆವು. ಆದರೆ ನಿರಾಶೆಯಿಂದ ಹಿಂತಿರುಗಿ ಬರಬೇಕಾಯ್ತು. ನಾನು ಗಟ್ಟಿಯಾಗಿರುವವರೆಗೆ ಪರವಾಗಿಲ್ಲ. ಆದರೆ ಮುಂದೆ ಅವಳ ಜೀವನ ಹೇಗೆ? ಯಾರು ಅವಳನ್ನು ನೋಡಿಕೊಳ್ಳುವವರು? ಅವಳು ಏನು ಕೆಲಸ ಮಾಡಬಹುದು?" ಇವು ಅವರ ತವಕದ ಪ್ರಶ್ನೆಗಳು. ಹಲವಾರು ಸಾಧ್ಯತೆಗಳ ಬಗ್ಗೆಯೂ ಚರ್ಚಿಸುತ್ತಾರೆ.

"ಈ ಘಟನೆಯಿಂದ ನಮ್ಮ ಸಮುದಾಯದಿಂದಲೇ ದೂರವಾದ್ವಿ. ಸಾಂಪ್ರದಾಯಿಕ ಸಮಾಜ ನಮ್ಮನ್ನೇ ದೂರಿತು. ನನ್ನ ಮಗಳದೇ ಏನೋ ತಪ್ಪಿರಬೇಕೆಂದು ಅನುಮಾನದಿಂದ ನಮ್ಮನ್ನೇ ನೋಡುತ್ತಾರೆ. ಚಿಕಿತ್ಸೆಗಾಗಿ ಹಣ ಕೇಳಬಹುದೆಂದೂ ದೂರ ಮಾಡಿದರು; ಮಕ್ಕಳನ್ನು ಸರಿಯಾಗಿ ಬೆಳಸಿಲ್ಲವೆಂದು ದೂರಿದರು; ಮಾಧ್ಯಮಗಳಲ್ಲಿ ಈ ಘಟನೆಯ ವಿವರಗಳು ಬಂದಾಗ ಇನ್ನಷ್ಟು ಗೌರವ ಹಾಳಾಗುತ್ತದೆಯೆಂದು ಟೀಕಿಸಿದರು. ಈಗಾಗ್ಲೆ ದೊಡ್ಡ ಮಗಳ ಜೀವನ ಹಾಳಾಯ್ತು. ಇನ್ನು ಚಿಕ್ಕ ಮಗಳನ್ನಾದ್ರು ಹೊರಗೆ ಕಳಿಸದೇ ಮನೆಯಲ್ಲಿಯೇ ಇಟ್ಟುಕೊಳ್ಳಿ ಎಂದು ಬುದ್ಧಿ ಹೇಳಿದರು. ತಂದೆಯೊಂದಿಗೆ ದನಿಗೂಡಿಸಿದ ಹಸೀನಾ "ಆದ್ರೆ ನನ್ನ ದುಃಖಕ್ಕೆ ನಮ್ಮ ಸಮುದಾಯದ ಗಡಿಯನ್ನು ಮೀರಿದ ಹೃದಯಗಳು ಮಿಡಿದವು. ಹಿಂದೂಗಳು ದೇವಸ್ಥಾನದಲ್ಲಿ ನನ್ನ ಹೆಸರಿನಲ್ಲಿ ಪೂಜೆ ಮಾಡಿಸಿ ಪ್ರಸಾದ ಕಳಿಸಿದ್ದಾರೆ. ಚರ್ಚಿನಲ್ಲಿ ನನಗಾಗಿ ಪ್ರಾರ್ಥನೆ ಮಾಡಿ ನನಗೆ ಧೈರ್ಯ ನೀಡಿದ್ದಾರೆ' ಎನ್ನುತ್ತಾಳೆ. ತಂದೆ, ಮಗಳಿಗೆ ಬೆಂಬಲ ನೀಡಿ ಪತ್ರ ಬರೆದವರ ಫೈಲ್ ಒಂದನ್ನು ತೆರೆದು ತೋರಿಸುತ್ತಾರೆ. ಶಿವಮೊಗ್ಗೆಯಿಂದ ನಿರುದ್ಯೋಗಿ ಯುವಕನೊಬ್ಬ ಹಸೀನಾಳಿಗೆ ಬೆಂಬಲ ನೀಡಿ ಬರೆದ ಪತ್ರ, ವೆಂಕಟರಮಣಸ್ವಾಮಿಯ ಒಂದು ಪದಕ, ತಾನು ಹೆಚ್ಚು ಸಹಾಯ ನೀಡಲಾಗದಿದ್ದರೂ ಆತ್ಮೀಯ ಕಳಕಳಿ. ಸಹಾನು ಭೂತಿಯ ಅಭಿವ್ಯಕ್ತಿ. ಆತ ನೂರಾರು ಬೆಲೆ ಬಾಳುವ ಪದಕಗಳನ್ನು ಹಸೀನಾಳಿಗೆ ಕಳಿಸಿದ್ದಾನೆ. ಹಲವಾರು ಪತ್ರದೊಂದಿಗೆ ಈ ಪತ್ರವೂ ಜೋಪಾನವಾಗಿದೆ. ಫೈಲ್ ವಾಪಸ್ಸು ತೆಗೆದು ಕೊಳ್ಳುತ್ತಾ "ನನಗೆ ನಮ್ಮ ಸಮುದಾಯದವರು ಬೆಂಬಲ ನೀಡದಿದ್ರು ಪರವಾಗಿಲ್ಲ. ಬೇರೆಯವರು, ಎಲ್ಲ ಧರ್ಮದವರೂ ನಮಗೆ ನೆರವಾಗಿದ್ದಾರೆ" ಎನ್ನುತ್ತಾರೆ ಹುಸೇನ್ ಸಾಹೇಬರು.

"ನನ್ನ ಮಗಳಿಗಾದ ಅನ್ಯಾಯ ಯಾವ ಹೆಣ್ಣು ಮಕ್ಕಳಿಗೂ ಆಗಬಾರದು ಅಂತ ನಾವು ನ್ಯಾಯಕ್ಕಾಗಿ ಹೋರಾಡಿದ್ವಿ. ಸೆಷನ್ ನ್ಯಾಯಾಲಯದಲ್ಲಿ ಅವನಿಗೆ ಐದು ವರ್ಷ ಜೈಲು ಹಾಗೂ ಮೂರು ಲಕ್ಷ ರೂಪಾಯಿ ದಂಡ ಹಾಕಿದ್ರು. ಆದ್ರೆ ವಿಚಾರಣೆ ನಡೆಯುವಾಗಲೇ ಐದು ವರ್ಷ ಕಳೆದು ಹೋಗಿತ್ತು. ಹಾಗಾಗಿ ನಾವು ಹೈಕೋರ್ಟಿಗೆ ಹೋದ್ವಿ. ಹೈಕೋರ್ಟು ನೀಡಿದ ತೀರ್ಪಿನಿಂದ ನಮಗೆ ಸಮಾಧಾನವಾಗಿದೆ. ಆದ್ರೆ ನನ್ನ ಮಗಳ ಜೀವನವೇನು ಸರಿಹೋಗುತ್ತಾ? ಆದ್ರೆ ಬೇರೆ ಹೆಣ್ಣುಮಕ್ಕಳ ಮೇಲೆ ಇಂತಹ ದೌರ್ಜನ್ಯ ನಡೆಯದೆ ಇರಲು ಇದೊಂದು ಮುಖ್ಯವಾದ ತೀರ್ಪು. ಹೆಣ್ಣುಮಕ್ಕಳ ಮೇಲೆ ಈ ರೀತಿಯ ದೌರ್ಜನ್ಯವನ್ನು ಅಪ್ಪ, ಅಣ್ಣ, ಗಂಡ ಯಾರೇ ಮಾಡಲಿ ಅವರಿಗೆ ಆ ಶಿಕ್ಷೆ ಆಗಲೇಬೇಕು. ಇದು ಹೋರಾಟದಿಂದ ಮಾತ್ರ ಸಾಧ್ಯ" ಎನ್ನುತ್ತಾರೆ. "ನನ್ನ ಮಗಳ ಮೇಲೆ ನಡೆದ ಈ ಘಟನೆಯ ನಂತರ, ಎಷ್ಟೋ ಹೆಣ್ಣು ಮಕ್ಕಳ ಪ್ರಾಣ ಉಳಿಸಲು ಸಾಧ್ಯವಾಗಿದೆ. ಸಾಯಬೇಕೆಂದು ಸೀಮೆಎಣ್ಣೆಯನ್ನು ಪಕ್ಕದಲ್ಲಿ ಇಟ್ಟುಕೊಂಡ ಮಹಿಳೆಯೊಬ್ಬಳು ಹಸೀನಾಳ ವಿಷಯ ಓದಿ ಆಕೆಯ ಧೈರ್ಯವನ್ನು ಮೆಚ್ಚಿ ಫೋನ್

ಮಾಡಿ ಮಾತನಾಡಿದ್ದಾಳೆ. ತಾನು ಸಾಯದೆ ಬದುಕುವ ನಿರ್ಧಾರ ವನ್ನು ಮಾಡಿದ್ದಾಳೆ". ಈ ಘಟನೆಯನ್ನು ತುಂಬಾ ಸಂತೋಷ ದಿಂದ ಹೇಳುತ್ತಾ, ಹಲವಾರು ಹೆಣ್ಣು ಮಕ್ಕಳು ಈಗಲೂ ತಮ್ಮ ಸಲಹೆ, ಮಾರ್ಗದರ್ಶನವನ್ನು ಕೇಳುತ್ತಾರೆಂದು ಹಸೀನಾ ಸಹ ದನಿಗೂಡಿಸುತ್ತಾಳೆ.

ಸೆಷನ್ ನ್ಯಾಯಾಲಯದಲ್ಲಿ ನೀಡಿದ್ದ ತೀರ್ಪಿನ ಬಗ್ಗೆ ನಮಗೆ ತುಂಬಾ ಅಸಮಧಾನವಾಗಿತ್ತು. ಐದು ವರ್ಷ ವಿಚಾರಣಾ ಅವಧಿಯಲ್ಲಿ ಮುಗಿದು ಹೋಗಿತ್ತು. ಮೂರು ಲಕ್ಷ ಪರಿಹಾರಧನ. ನನ್ನ ಜೀವನವೇ ನಾಶವಾಗಿದೆ. ಹಾಗಾಗಿ ನಾವು ಹೈಕೋರ್ಟ್‌ಗೆ ಹೋಗುವುದು ಅನಿವಾರ್ಯವಾಗಿತ್ತು. ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿತ್ತು. ಕೆಲವರು ಹೇಗೂ ನಿನ್ನ ಜೀವನ ಹಾಳಾಯ್ತು. ಅವನಾದ್ರು ಬದುಕಲಿ ಬಿಡು ಎಂಬಂತೆ ಮಾತನಾಡುತ್ತಿದ್ದರು. ನನಗಾದ ಅನ್ಯಾಯ ಬೇರೆ, ಯಾವ ಹೆಣ್ಣುಮಕ್ಕಳಿಗೂ ಹೀಗೆ ಆಗಬಾರದು. ವಿಚಾರಣೆಯ ಸಮಯದಲ್ಲಿ ನಾನು ನೇರವಾಗಿ ನ್ಯಾಯಾಧೀಶರಿಗೆ 'ಇದು ನನಗೆ ನೀಡಿರುವ ಶಿಕ್ಷೆ, ಅವನು ಈ ಅನ್ಯಾಯ ಮಾಡಿ ತಪ್ಪಿಸಿಕೊಂಡು ಹೋಗಬಾರದು. ಇದರ ಬದಲಾಗಿ ನನಗೆ ಮರ್ಸಿ ಕಿಲ್ಲಿಂಗ್‌ಗೆ ಅನುಮತಿ ನೀಡಿ ಎಂದು ದನಿ ಎತ್ತಿ ಚೀರಾಡಿದೆ' ಹಸೀನಾ ಅವೇಶದಿಂದ ನುಡಿಯುತ್ತಾಳೆ. ಹೈಕೋರ್ಟ್ ನೀಡಿದ ತೀರ್ಪಿನಿಂದ ನನಗೆ ನೆಮ್ಮದಿಯಾಗಿದೆ. ನಿಟ್ಟುಸಿರು ಬಿಡುತ್ತಾಳೆ ಹಸೀನಾ.

ಹಸೀನಾ ಜೀವನ, ಹೋರಾಟ ಹಲವಾರು ಹೆಣ್ಣು ಮಕ್ಕಳ ಜೀವನಕ್ಕೆ ದಾರಿದೀಪವಾಗಿದೆ. "ಹೆಣ್ಣುಮಕ್ಕಳು ಸಮಸ್ಯೆಗಳು ಎದುರಾದಾಗ ಹೋರಾಡಬೇಕು. ಆತ್ಮಹತ್ಯೆ ಮಾಡಿಕೊಳ್ಳುವು ದರಿಂದ ಏನಾಗುತ್ತೆ? ಬಂದಿರುವ ಕಷ್ಟಗಳನ್ನು ಎದುರಿಸಿ ಜೀವನ ಮಾಡಬೇಕು. ತಂದೆ-ತಾಯಿಯರ ಬೆಂಬಲ ಸಹಕಾರ ಹೆಣ್ಣು ಮಕ್ಕಳಿಗೆ ಸಿಗಬೇಕು". ಎನ್ನುವ ಹಸೀನಾ "ರೋಡ್ರಿಗ್ಸ್ ನನ್ನನ್ನು ನಾಶ ಮಾಡಿರಬಹುದು. ಆದರೆ ಜನ ತೋರಿಸಿದ ವಿಶ್ವಾಸ ಪ್ರೀತಿ ನನ್ನನ್ನು ಕಾಪಾಡಿದೆ" ಎಂದು ಮಾತು ಮುಗಿಸುತ್ತಾಳೆ. ❑

"ಎಲ್ಲಿ ಹೆಣ್ಣಿಗೆ ಗೌರವ ನೀಡಲಾಗುತ್ತದೆಯೋ ಅಲ್ಲಿ ದೇವರು ವಾಸಿಸುತ್ತಾನೆ" ಎಂದು ಹೇಳುವ ನ್ಯಾಯಾಧೀಶರು ನೊಂದ ಹಸೀನಾಗೆ ನ್ಯಾಯ ಒದಗಿಸುವುದರ ಮೂಲಕ ದೌರ್ಜನ್ಯವೆಸಗುವ ಅಪರಾಧಿಗಳಿಗೆ ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಐ.ಪಿ.ಸಿ. ಸೆಕ್ಷನ್ 307ರ ಪ್ರಕಾರ ಅಪರಾಧಿಯಾದ ರೋಡ್ರಿಗ್ಸ್‌ಗೆ ಕೊಲೆಯ ಯತ್ನಕ್ಕಾಗಿ ಜೀವಾವಧಿ ಶಿಕ್ಷೆಯನ್ನು ನೀಡಿದ್ದಾರೆ. ಸುಪ್ರೀಂಕೋರ್ಟ್ ನೀಡಿದ ಹಲವಾರು ತೀರ್ಪುಗಳ ನಿದರ್ಶನಗಳನ್ನು ಸಹ ತೀರ್ಪಿನಲ್ಲಿ ಉದಹರಿಸಿದ್ದಾರೆ. ಅಪರಾಧಿಯು ಚಿಕ್ಕ ವಯಸ್ಸಿನವನು, ಕಷ್ಟಪಟ್ಟು ಕೆಲಸವನ್ನು ಹುಡುಕಿ ಕೊಂಡಿರುವುದು, ವಯಸ್ಸಾದ ತಂದೆ-ತಾಯಿಯ ಜವಾಬ್ದಾರಿ ಕುರಿತಂತೆ ಅಪರಾಧಿಯ ವಕೀಲರ ವಾದಕ್ಕೆ - ಹಸೀನಾಳ ಸುಂದರ ಬದುಕು ನಾಶವಾಗಿರುವುದು, ದೈಹಿಕ ವಿಕಲಾಂಗತೆ, ಕಣ್ಣು ಕಳೆದುಕೊಂಡಿರುವುದು, ಅವಳ ತಾಯ್ತನದ ಆಸೆಗಳು ನಾಶವಾಗಿರುವುದು, ಆಕೆ ಮನೆಯಲ್ಲಿಯೇ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವುದು, ತಂದೆ ತಾಯಿಯ ಮೌನ ರೋಧನ ಮುಂತಾದ ಮಾನವೀಯ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಪು ನಿಡಲಾಗಿದೆ.

ಇಷ್ಟು ಕ್ರೂರವಾದ ಅಪರಾಧಕ್ಕೆ ಏನು ಶಿಕ್ಷೆ ವಿಧಿಸಬೇಕೆಂಬ ಪ್ರಶ್ನೆಯನ್ನು ಕೇಳಿಕೊಂಡಾಗ, ಹಸೀನಾಳ ಸ್ಥಿತಿಯ ಹಿನ್ನೆಲೆಯಲ್ಲಿ ಪುರಾತನವಾದ 'ಕಣ್ಣಿಗೆ ಕಣ್ಣು' ಶಿಕ್ಷೆಯನ್ನೇ ಕೊಡಬೇಕಾಗುತ್ತದೆ. ಆದರೆ ಈ ಮಾದರಿಯ ಶಿಕ್ಷೆಯನ್ನು ನೀಡಲು ಸಾಧ್ಯವಿಲ್ಲ. ನಾವೀಗ ನಾಗರೀಕ ಸಮಾಜದಲ್ಲಿ ಬದುಕುತ್ತಿದ್ದೇವೆ. ಅಪರಾದಿಯು ಹಸೀನಾಳನ್ನು ಜೀವನಪೂರ್ತಿ ನರಳುವಂತೆ ಮಾಡಿದ್ದಾನೆ. ಇದು ಆತನ ಕೃತ್ಯಕ್ಕೆ ನೀಡಿರುವ ಕನಿಷ್ಠ ಪ್ರಮಾಣದ ಶಿಕ್ಷೆ.

ಬಡ, ಮಧ್ಯಮ ವರ್ಗದ ಮಹಿಳೆಯರೇ ಇಂತಹ ಹಿಂಸೆಗೆ ಒಳಗಾದಾಗ ಅವರಿಗೆ ಚಿಕಿತ್ಸೆಯ ವೆಚ್ಚವನ್ನು ಭರಿಸಲು ಸಾಧ್ಯವಾಗದ ಕಾರಣ ಸರ್ಕಾರ ಅವರಿಗಾಗಿ ವಿಶೇಷವಾದ ಯೋಜನೆಗಳನ್ನು ರೂಢಿಸಬೇಕೆಂಬ ಅಂಶವನ್ನು ತೀರ್ಪಿನಲ್ಲಿ ಸೇರಿಸಲಾಗಿದೆ.

ಆ್ಯಸಿಡ್ ಪ್ರಕರಣಗಳಲ್ಲಿ ಈ ತೀರ್ಪು ಮಹತ್ವದ್ದಾಗಿದೆ. ಸಾಮಾನ್ಯವಾಗಿ ಸರಿಯಾದ ಸಾಕ್ಷಿಗಳಿಲ್ಲದೆ ಬಹುಪಾಲು ಕೇಸುಗಳು ಬಿದ್ದು ಹೋಗುತ್ತವೆ. ಪ್ರಮುಖವಾಗಿ ತಾಂತ್ರಿಕ ಲೋಪದೋಷಗಳಿಂದಾಗಿ ನ್ಯಾಯದಿಂದ ವಂಚಿತರಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆಯನ್ನು ನೀಡಿರುವುದು ಅಪರಾಧ ತಡೆಯುವಲ್ಲಿ ಮುಖ್ಯವಾದ ಒಂದು ಮೆಟ್ಟಿಲು.

ಹೈಕೋರ್ಟ್ ತೀರ್ಪು

ದಿನಾಂಕ 24-09-2006 ರಂದು ಸೀಸಾ ವೇದಿಕೆಯವರು ಹಸೀನಾ ತೀರ್ಪು ಬಂದ ಹಿನ್ನೆಲೆಯಲ್ಲಿ ಆ್ಯಸಿಡ್ ಘಟನೆಗಳನ್ನು ಕುರಿತು ಮುಂದೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಕುರಿತು ಚರ್ಚೆಯನ್ನು ಏರ್ಪಡಿಸಲಾಗಿತ್ತು. ವೇದಿಕೆಯ ಕಾರ್ಯಕರ್ತೆ ಮಲ್ಲಿಗೆಯವರು ಕಳೆದ ನಾಲ್ಕು ವರ್ಷಗಳಲ್ಲಿ ಸುಮರು 56 ಪ್ರಕರಣಗಳು ಬೆಳಕಿಗೆ ಬಂದಿವೆ ಎಂದು ಹೇಳುತ್ತಾ, ಹಸೀನಾ ಬಗ್ಗೆ ಹೈಕೋರ್ಟ್ ನೀಡಿದ ತೀರ್ಪು ಒಂದು ಮೈಲಿಗಲ್ಲಾಗಿರುವುದರಿಂದ, ಮುಂದೆ, ಹೇಗೆ ಕಾರ್ಯಕ್ರಮ ಗಳನ್ನು ರೂಪಿಸಬೇಕು ಎಂಬ ಉದ್ದೇಶದಿಂದ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಅತಿಥಿಗಳನ್ನು ಸ್ವಾಗತಿಸಿದರು. ಪ್ರಖ್ಯಾತ ವಕೀಲರಾದ ಶ್ರೀಮತಿ ಹೇಮಲತಾ ಮಹಿಷಿಯವರು ಮಾತನಾಡುತ್ತಾ ಹೈಕೋರ್ಟ್ ನೀಡಿದ ತೀರ್ಪು ಹೋರಾಟಗಾರರಿಗೆ ಒಂದು ಬಲವಾದ ನೈತಿಕ ಬೆಂಬಲವನ್ನು ನೀಡಿದೆಯಲ್ಲದೆ ಮಹಿಳೆಯರಿಗೆ ನ್ಯಾಯ ಸಿಗಬಹುದೆಂಬ ಭರವಸೆಯು ದೊರೆತಿದೆಯೆಂದು ಹೇಳಿದರು. ಕೊಲೆಯ ಪ್ರಯತ್ನವೆಂದು ಅಪರಾಧವನ್ನು ವ್ಯಾಖ್ಯಾನ ಮಾಡಿರುವುದು ಮುಖ್ಯವಾದ ವಿಚಾರವೆಂದ ಅವರು ಈ ತೀರ್ಪು ಬೇರೆ ಪ್ರಕರಣಗಳಿಗೆ ಒಂದು ಉದಾಹರಣೆಯಾಗುತ್ತದೆ. ನ್ಯಾಯಾಧೀಶರು ಸಹ ಸಮಾಜದ ಒಂದು ಭಾಗ. ಬಾಬ್ರಿದೇವಿ ಕೇಸಿನಲ್ಲಿ ಅತ್ಯಾಚಾರ ನಡೆಸಿದ ವ್ಯಕ್ತಿ ಶ್ರೀಮಂತ, ಮೇಲು ಜಾತಿಯವನು ಆಗಿದ್ದರಿಂದ ಅವನು ಸುಳ್ಳು ಹೇಳಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ನ್ಯಾಯಾಧೀಶರೇ ಕೇಳಿದ್ದಾರೆ. ಇಂತಹ ನ್ಯಾಯಾಧೀಶರೇ ಹೆಚ್ಚಾಗಿದ್ದರೆ ನ್ಯಾಯ ಪಡೆಯುವುದು ಹೇಗೆ ಎನ್ನುತ್ತಾ ಬಾಬ್ರಿದೇವಿಯ ತೀರ್ಪನ್ನು ಕುರಿತು ಮಾತನಾಡಿದರು.

ಮತ್ತೊಬ್ಬ ಖ್ಯಾತ ವಕೀಲರಾದ ರವಿವರ್ಮಕುಮಾರ್ ರವರು ಮಾತನಾಡುತ್ತಾ, ಒಂದು ಕೇಸು ಇಷ್ಟು ಬದಲಾವಣೆ ಯನ್ನು ತರಬಹುದು ಎಂಬುದು ತುಂಬಾ ಆಶಾದಾಯಕ, ಹಾಗು ಈ ತೀರ್ಪು ಮಾನವ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಹೇಳುತ್ತಾ, ನಿಷ್ಪಕ್ಷಪಾತವಾದ, ಕೂಲಂಕಷ ವಾಗಿ ಪರಿಶೀಲನೆ ನಡೆಸಿ, ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಮನಮುಟ್ಟುವ ತೀರ್ಪನ್ನು ನೀಡಿದ್ದಕ್ಕಾಗಿ ಹೈಕೋರ್ಟನ್ನು ಶ್ಲಾಘಿಸಿದರು. ಆ್ಯಸಿಡ್ ಎರಚುವಂತಹ ಕೆಲಸವನ್ನು ವಿದ್ಯಾವಂತರು ಮಾಡುತ್ತಾರೆಂದರೆ ಅವರು ಪಡೆದುಕೊಂಡ ಶಿಕ್ಷಣದ ವೈಫಲ್ಯವನ್ನು ತೋರಿಸುತ್ತದೆ. ಧಾರ್ಮಿಕ ವ್ಯಕ್ತಿ ಇಂತಹ ಹೀನ ಕೃತ್ಯ ಮಾಡುತ್ತಾನೆಂದರೆ ಅದು ಧರ್ಮದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಮಾನವ ಹಕ್ಕುಗಳ ರಕ್ಷಣೆಯನ್ನು ಸಮಾಜ, ಸರ್ಕಾರ, ಕಾನೂನು, ಪೊಲೀಸರು, ಮಾಡಬೇಕು. ಆದರೆ ಇವು ವಿಫಲವಾಗಿರುವುದರಿಂದ ನೊಂದವರೇ ಸಂಘಟನೆ ಮಾಡಬೇಕಾಗುತ್ತದೆ ಎಂದು ನುಡಿದರು. ಆ್ಯಸಿಡ್ ಧಾಳಿಗೆ ಒಳಗಾಗಿರುವ ಮಹಿಳೆಯರನ್ನು ಕುರಿತು, ನಿಮಗಾಗಿರುವ ಆಘಾತ ನಮಗೆ ಹಾಗೂ ಸಮಾಜಕ್ಕೆ ಆಗಿರುವ ಆಘಾತ. ನಿಮ್ಮ ದೇಹಕ್ಕೆ ಹಾನಿಯಾಗಿದೆ, ಆದರೆ ನಿಮ್ಮ ಮನಸ್ಸಿಗಲ್ಲ ಎಂದು ಹೇಳುತ್ತಾ, ದೈಹಿಕ ತೊಂದರೆಗಳನ್ನು ಮೀರಿ ಜೀವಂತಿಕೆಯನ್ನು ಉಳಿಸಿಕೊಳ್ಳಬೇಕೆಂದು ಹಲವಾರು ನಿದರ್ಶನ ಗಳನ್ನು ನೀಡಿದರು. ಕೊಲೆಯ ಪ್ರಯತ್ನವನ್ನು ಪುನರ್ ವ್ಯಾಖ್ಯಾನ ಮಾಡುವ ಅಗತ್ಯವನ್ನು ನ್ಯಾಯಾಧೀಶರು ಸಹ ಒತ್ತಿ ಹೇಳಿದ್ದಾರೆ ಎನ್ನುತ್ತಾ, ಹಸೀನಾ ಬಗ್ಗೆ ನೀಡಲಾಗಿರುವ ತೀರ್ಪು, ಇದಕ್ಕೆ ನೆಲಗಟ್ಟನ್ನು ಒದಗಿಸಿದೆಯೆಂದರು.

ವಕೀಲರಾದ ಸುಧೀಂದ್ರ ಅವರು ಮಾತನಾಡುತ್ತಾ, ಆ್ಯಸಿಡ್ ಧಾಳಿಗೆ ಒಳಗಾದವರ ನೆರವಿಗೆ ಆರ್ಥಿಕ ಸಹಾಯವನ್ನು ಒದಗಿಸಲು ಒಂದು ನಿಧಿಯನ್ನು ಸ್ಥಾಪಿಸುವ ಅಗತ್ಯವನ್ನು ಒತ್ತಿ ಹೇಳಿದರು. ಆ್ಯಸಿಡ್ ಕೊಳ್ಳುವವರ, ಮಾಹಿತಿ ಸಂಗ್ರಹವನ್ನು ಕಡ್ಡಾಯಗೊಳಿಸಬೇಕೆಂದರು.

ಹಸೀನಾ ಕೇಸ್‌ನಲ್ಲಿ ಅವಳಿಗೆ ನೆರವಾಗುತ್ತಿರುವ ಶೀಲಾ ರಾಮನಾಥನ್‌ರವರು ಸಹ ಮಾತನಾಡಿ ಚಿಕಿತ್ಸೆ ನೀಡಲು ಆಗುತ್ತಿರುವ ವಿಳಂಬವನ್ನು ಕುರಿತು ಆತಂಕ ವ್ಯಕ್ತ ಪಡಿಸಿದರು. ಸಭೆಯಲ್ಲಿ ಭಾಗವಹಿಸಿದವರು ಹಲವಾರು ಸಲಹೆಗಳನ್ನು ನೀಡಿದರು.

ಎಚ್.ಎಸ್. ಪುಷ್ಪ

ಎಚ್.ಎಸ್. ರಾಜೇಶ್ವರಿ

ಏಳನೆಯ ರಾಷ್ಟ್ರೀಯ ಮಹಿಳಾ ಸಮಾವೇಶ

ಕನ್ನಡಕ್ಕೆ : ಚಂಪಾವತಿ ಎಚ್.ಎಸ್.

ಈ ರಾಷ್ಟ್ರೀಯ ಸಮಾವೇಶವನ್ನು ರಾಷ್ಟ್ರೀಯ ಸಂಘಟನಾ ಸಮಿತಿಯು ನಡೆಸುತ್ತದೆ. ಈ ಸಂಘಟನೆ ಪ್ರತಿ ಸಮಾವೇಶದ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದು, ಅನಂತರದಲ್ಲಿ ಅಸ್ತಿತ್ವ ರಹಿತವಾಗುತ್ತದೆ. ಈ ಸಮಿತಿಯು ನೊಂದಾಯಿಸಲ್ಪಟ್ಟಿಲ್ಲ ಅಥವಾ ಯಾವಾಗಲೂ ಇರುವಂತಹ ಸಮಿತಿಯೂ ಅಲ್ಲ. ಪ್ರತಿ ಸಮಾವೇಶ ನಡೆಯುವ ಮುಂಚೆ ಈ ಸಂಘಟನಾ ಸಮಿತಿಯು ಸಭೆ ಸೇರಿ ಹೊಸ ಹೊಸ ಸದಸ್ಯರನ್ನು ಸಮಿತಿಗೆ ಸೇರಿಸುತ್ತಾರೆ. ಈ ಸಮಾವೇಶಕ್ಕೆ ಹಣವನ್ನು ಸದಸ್ಯರ ನೊಂದಾವಣಿಯಿಂದ ಹಾಗೂ ಕೊಡುಗೆಗಳಿಂದ ಎತ್ತಲಾಗುತ್ತದೆ. ಯಾವುದೇ ಧನಸಹಾಯಕ್ಕಾಗಿ ಸಮಿತಿಯು ನೇರವಾಗಿ ಫಂಡಿಂಗ್ ಏಜೆನ್ಸಿಗಳನ್ನು ಕೇಳುವುದಿಲ್ಲ ಅಥವಾ ಅವರು ಧನಸಹಾಯ ನೀಡಿದರೂ ಒಪ್ಪಿಕೊಳ್ಳುವುದಿಲ್ಲ. ಈ ಲೇಖನ ರಾಷ್ಟ್ರೀಯ ಸಂಘಟನಾ ಸಮಿತಿಯ ಘೋಷಣೆಯ ಪತ್ರವಾಗಿದೆ.

1980ರಿಂದ ಇಲ್ಲಿಯವರೆಗೆ ಆರು ರಾಷ್ಟ್ರೀಯ ಮಹಿಳಾ ಸಮಾವೇಶಗಳನ್ನು ಸ್ವಾಯತ್ತ ಮಹಿಳಾ ಸಂಸ್ಥೆಗಳು ಹಮ್ಮಿಕೊಂಡಿವೆ. 2006ರಲ್ಲಿ ಕೊಲ್ಕತ್ತಾದಲ್ಲಿ ನಡೆದಿರುವ ಸಮಾವೇಶ ಏಳನೆಯದು. ಸಮಾವೇಶದ ಉದ್ದೇಶವೆಂದರೆ ಬೇರೆ–ಬೇರೆ ಸಂಘಟನೆಗಳೊಡನೆ ಸಂಪರ್ಕ ಹೊಂದುವುದು, ಅವರ ಅನುಭವಗಳನ್ನು ಹಂಚಿಕೊಳ್ಳುವುದು, ಗೆಳೆತನ ಬೆಳೆಸುವುದು, ಇತರರ ಹೋರಾಟಗಳೊಡನೆ ನಮ್ಮ ಸಹಭಾಗಿತ್ವ ತೋರಿಸುವುದು, ಭವಿಷ್ಯದ ಕಾರ್ಯಚಟುವಟಿಕೆ ಹಾಗೂ ಕಾರ್ಯತಂತ್ರವನ್ನು ಒಟ್ಟಾಗಿ ರೂಪಿಸುವುದು. ಈ ಕೆಲವು ವರ್ಷಗಳಲ್ಲಿ ಸಮಾವೇಶ ನಮ್ಮೆಲ್ಲರ ವಿಚಾರಧಾರೆಗಳ, ರಾಜಕೀಯ ಹಾಗೂ ಹೋರಾಟಗಳ ಅಭಿವ್ಯಕ್ತಿಗೆ ಇರುವ ಒಂದು ವೇದಿಕೆಯಾಗಿದೆ. ಇಲ್ಲಿ ಯಾವುದೇ ಒಂದು ಧ್ವನಿ ಇತರರ ಧ್ವನಿಗಿಂತ ಪ್ರಬಲವಾಗುವುದಿಲ್ಲ. ಬದಲಾಗಿ, ಪ್ರಜಾಪ್ರಭುತ್ವ, ಸೋದರತ್ವ, ಸಹಭಾಗಿತ್ವದಂತಹ ಕಲ್ಪನೆಗಳು – ಚರ್ಚೆ ಹಾಗೂ ಮಾತುಕತೆಯನ್ನು ಬೆಂಬಲಿಸುತ್ತವೆ. ಏಳನೆಯ ಸಮಾವೇಶದ ಉದ್ದೇಶ ಕೂಡಾ ಭಾರತದ ಮಹಿಳಾ ಚಳವಳಿಯ ಶ್ರೀಮಂತ ಚರಿತ್ರೆಯನ್ನು ಬಿಂಬಿಸುವುದಾಗಿತ್ತು. ನಮ್ಮೆಲ್ಲರ ಬಲವನ್ನು ವೃದ್ಧಿಗೊಳಿಸುವುದು, ನ್ಯಾಯಕ್ಕಾಗಿ ಮಹಿಳೆಯರ ನಿರಂತರ ಮಧ್ಯ ಪ್ರವೇಶಿಕೆಯನ್ನು ಕಾಣುವಂತೆ ಮಾಡುವುದು ಹಾಗೂ ನ್ಯಾಯ, ಸಮಾನತೆಗಾಗಿ ನಡೆಯುವ ಎಲ್ಲಾ ಹೋರಾಟಗಳಲ್ಲಿ ಸಹಭಾಗಿತ್ವ ತೋರಿಸುವುದಾಗಿತ್ತು.

"ನಾವು ಬೇರೆ ಬೇರೆ ಸಂಘಟನೆಗೆ ಸೇರಿದ ಮಹಿಳೆಯರು. ಹಾಗೂ ವಿವಿಧ ಸ್ತರಗಳ ಬದುಕುಗಳಿಂದ ಬಂದವರು, ಬೇರೆ ಬೇರೆ ರಾಜ್ಯಗಳಿಗೆ ಸೇರಿದವರೂ ಕೂಡಾ. ನಮ್ಮ ಸ್ತ್ರೀವಾದದ ರಾಜಕೀಯ ನಂಬಿಕೆಗಳು ವಿಭಿನ್ನವಾದವು. ನಾವು ವಿವಿಧ ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಯಿಂದ ಬಂದವರು. (ಕೆಲವರು ಧಾರ್ಮಿಕ ನಂಬಿಕೆಗಳು ಇಲ್ಲದವರು) ಹಾಗೆಯೇ ಬೇರೆ ಬೇರೆ ಜಾತಿ, ವರ್ಗ, ಭಾಷೆಗಳಿಂದ ಬಂದವರು. ಪಿತೃ ಪ್ರಧಾನತೆಯ ಸವಾಲುಗಳನ್ನು ಎದುರಿಸಲು ನಾವು ಬೇರೆ ಬೇರೆ ರೀತಿಯಲ್ಲಿ ಹೋರಾಡುತ್ತೇವೆ. ಈ ವೈವಿಧ್ಯವನ್ನು ಗುರುತಿಸುವ ಹಾಗೂ ಗೌರವಿಸುವ ಬದ್ಧತೆಯನ್ನು ನಾವು ಉಳಿಸಿಕೊಂಡಿದ್ದೇವೆ. ಈ ವೈವಿಧ್ಯಗಳಿಂದಾಗಿ ಉಂಟಾಗಿರುವ ಅನ್ಯಾಯಗಳಿಗೆ ನ್ಯಾಯವನ್ನು ಕೇಳುವ ಹಂತದಲ್ಲಿಯೂ ಸಹ ನಾವು ವೈವಿಧ್ಯಕ್ಕೆ ಬದ್ಧರಾಗಿಯೇ ಉಳಿದಿದ್ದೇವೆ".

ಈ ಘೋಷಣೆ ನಾವು ಹಂಚಿಕೊಂಡಿರುವ ರಾಜಕೀಯ ದೃಷ್ಟಿಕೋನ ಹಾಗೂ ಮಹಿಳಾ ಚಳವಳಿಯ ಬದ್ಧತೆಯ ಒಂದು ಅಭಿವ್ಯಕ್ತಿ. ಈ ಘೋಷಣೆಯನ್ನು 1998 ರಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಸಂಘಟನಾ ಸಮಿತಿಯವರು ಬರೆದಿದ್ದರು. ಈ ಘೋಷಣೆ ಈ ಕೆಲ ವರ್ಷಗಳಲ್ಲಿ ನಮ್ಮ ಪಯಣಗಳನ್ನು, ನಮ್ಮ ಕಾಳಜಿಯನ್ನು ಪ್ರತಿಬಿಂಬಿಸುತ್ತಾ, ಬದಲಾಗುತ್ತಾ ಬೆಳೆಯುತ್ತಿದೆ. ಈ ಘೋಷಣೆಗೆ ಬದ್ಧರಾಗಿರುವವರೆಲ್ಲರೂ ಈ ಸಮಾವೇಶದಲ್ಲಿ ಭಾಗವಹಿಸಬಹುದಾಗಿದೆ.

ಭಾರತದ ಮಹಿಳಾ ಚಳವಳಿಯಲ್ಲಿ ಅನೇಕ ಬಗೆಗಳಿವೆ. ರಾಷ್ಟ್ರೀಯ ಸಂಘಟನಾ ಸಮಿತಿ ಇವೆಲ್ಲದರ ಪ್ರತಿನಿಧಿ ಅಲ್ಲ. ರಾಷ್ಟ್ರೀಯ ಸಮಾವೇಶ ಸ್ವಾಯತ್ತ ಮಹಿಳೆಯರನ್ನು ಹಾಗೂ ಸಂಘಟನೆಗಳನ್ನು ಒಟ್ಟಿಗೆ ತರುತ್ತದೆ. ಅಂದರೆ ಸರ್ಕಾರೇತರ, ಚುನಾವಣಾ ರಹಿತ, ರಾಜಕೀಯವಲ್ಲದ ಪಕ್ಷ, ಅಹಿಂಸಾತ್ಮಕ, ಭೂಗತವಲ್ಲದ ಮತ್ತು ಫಂಡಿಂಗ್ ಏಜೆನ್ಸೀಸ್ ಈ ಗುಂಪುಗಳಲ್ಲಿ ಕೆಲವು ಅಧಿಕೃತವಾಗಿ ಮತ್ತೆ ಕೆಲವು ಅನಧಿಕೃತವಾಗಿ ಕೆಲಸ ಮಾಡುತ್ತವೆ. ಇವು ಒಟ್ಟಾಗಿ ಒಂದು ಸ್ಪಷ್ಟ ರಾಜಕೀಯ ವಾಹಿನಿಯನ್ನು ಹುಟ್ಟು ಹಾಕಿವೆ. ಸಮಾಜದ ಬಗ್ಗೆ, ಪಿತೃ ಪ್ರಾಧಾನ್ಯದ ಬಗ್ಗೆ ಹಾಗೂ ಜಾತಿ, ಲಿಂಗ, ವರ್ಗ, ಧರ್ಮ, ಲೈಂಗಿಕ ವಿಷಯಗಳ ಬಗ್ಗೆ ಇವು ಒಂದು ವಿಮರ್ಶಾತ್ಮಕ ದೃಷ್ಟಿಕೋನವನ್ನು ಹೊಂದಿವೆ.

ಸ್ವಾಯತ್ತ ಮಹಿಳಾ ಚಳವಳಿಯಾಗಿ ಮಹಿಳಾ ಶೋಷಣೆ ಹಾಗೂ ವಿಮೋಚನೆಯ ಬಗ್ಗೆ ನಾವು ಒಂದು ಸಾಮಾನ್ಯ ತಿಳಿವಳಿಕೆಯನ್ನು ಹಂಚಿಕೊಂಡಿದ್ದಾಗ್ಯೂ ಕಾರ್ಯಗತಗೊಳಿಸುವ ರೀತಿಯಲ್ಲಿ ನಾವು ಭಿನ್ನರಾಗಿರಬಹುದು. ಆದಾಗ್ಯೂ ನಮ್ಮ ನಂಬಿಕೆಗಳು, ವಿಚಾರಧಾರೆಗಳು ಒಟ್ಟಾಗಿ ರೂಪುಗೊಂಡು (evolve) ಪ್ರಪಂಚವನ್ನು ಒಟ್ಟಾಗಿ ನೋಡುವ, ತಾತ್ವಿಕತೆಯನ್ನು ಕಾರ್ಯಾಚರಣೆಯೊಂದಿಗೆ ಹೆಣೆಯುವ ಒಳನೋಟಗಳನ್ನು ನಮಗೆ ನೀಡಿವೆ. ಬದಲಾವಣೆಯ ತಂತ್ರವನ್ನು ರೂಪಿಸುವಲ್ಲಿ ನಾವು ರಾಜಕೀಯವನ್ನು ವೈಯಕ್ತಿಕವಾಗಿಸುವ, ವೈಯಕ್ತಿಯ ವಾದುದನ್ನು ರಾಜಕೀಯಗೊಳಿಸುವ ಪ್ರಯತ್ನವನ್ನು ಮಾಡಿದ್ದೇವೆ. ಪಿತೃಪ್ರಾಧಾನ್ಯ ಹಾಗೂ ಸಾಮಾಜಿಕ ಮೌಲ್ಯಗಳಾದ ಅಧಿಕಾರ, ಹಿಂಸೆ, ಸ್ಪರ್ಧೆ, ಶ್ರೇಣೀಕೃತ ವ್ಯವಸ್ಥೆಯನ್ನು ಕುಟುಂಬ ಹಾಗೂ ಸಮಾಜದಲ್ಲಿ ನಾವು ಎದುರಿಸುತ್ತಿರುತ್ತೇವೆ. ಅಲ್ಲದೇ ಜಾತಿ, ವರ್ಗ, ಪಿತೃಪ್ರಧಾನತೆಯು ಹೇರಲಾದ ಶೋಷಣೆ, ದಬ್ಬಾಳಿಕೆಯನ್ನೂ ಸಹ ನಾವು ಎದುರಿಸುತ್ತಿರುತ್ತೇವೆ.

ಕಳೆದ ಕೆಲವು ದಶಕಗಳಿಂದ ಭಾರತ ಅನೇಕ ಆರ್ಥಿಕ ರಾಜಕೀಯ ಬದಲಾವಣೆಗಳನ್ನು ಕಂಡಿದೆ. ಆದಾಗ್ಯೂ ಮಹಿಳೆಯರು ಕುಟುಂಬಗಳಿಂದ, ಸಮುದಾಯಗಳಿಂದ, ಪ್ರಭುತ್ವದಿಂದ, ಕಾರ್ಪೊರೇಟ್‌ಗಳಿಂದ ನಿಯಂತ್ರಿಸಲ್ಪಟ್ಟಿದ್ದಾರೆ. ನಮ್ಮ ಕೆಲಸ ಲೈಂಗಿಕತೆಯ ಆಧಾರದ ಮೇಲೆ ಮನೆಯಲ್ಲಿ ಹಾಗೂ ಕೆಲಸದ ಸ್ಥಳದಲ್ಲಿ ನಿಯಂತ್ರಿಸಲ್ಪಟ್ಟಿದೆ. ನಮ್ಮ ಸಂತಾನೋತ್ಪತ್ತಿಯು ವೈಭವೀಕರಿಸಲಾದ ತಾಯ್ತನ ಹಾಗೂ ಶುದ್ಧತೆಯ ಪರಿಕಲ್ಪನೆಯಿಂದ ನಿಯಂತ್ರಿಸಲ್ಪಟ್ಟಿದೆ. ನಮ್ಮ ಲೈಂಗಿಕತೆಯನ್ನು ಇಬ್ಬಗೆಯ ಲೈಂಗಿಕತೆ ಹಾಗೂ ಗಂಡು-ಹೆಣ್ಣಿನ ಮಧ್ಯ ಕಡ್ಡಾಯ ಸಂಬಂಧದಿಂದಾಗಿ ತುಳಿದು ಹಾಕಲಾಗಿದೆ. ನಮ್ಮ ದೇಹವನ್ನು ತಾರುಣ್ಯದ ಸಂದರ್ಭದಲ್ಲಿ ವ್ಯಾಪಾರೀಕರಣಗೊಳಿಸಲಾಗಿದೆ. ಹಾಗೂ ಸರಕೀಕರಣಗೊಳಿಸಲಾಗಿದೆ. ಧರ್ಮ ಹಾಗೂ ಸಂಸ್ಕೃತಿಗಳು ನಮ್ಮ ಮೇಲೆ ಅವಲಂಬಿಸಿವೆ. ಆದಾಗ್ಯೂ ಅವು ನಮ್ಮನ್ನು ಸುತ್ತು ಹಾಕಿಕೊಂಡು ನಮ್ಮ ಹಕ್ಕುಗಳನ್ನು ನಾಶಗೊಳಿಸುತ್ತವೆ. ಈ ರೀತಿಯ ನಿಯಂತ್ರಣಗಳು, ಅಧಿಕಾರ ಸಂಬಂಧಗಳು ಸೂಕ್ಷ್ಮವಾದ ರೀತಿಯಲ್ಲಿ ಹಾಗೂ ಬಾಹ್ಯವಾಗಿಯೂ ವ್ಯಕ್ತಗೊಳ್ಳುತ್ತವೆ, ವೈಚಾರಿಕ ನೆಲೆಯಲ್ಲಿ, ವಸ್ತುನಿಷ್ಠ ನೆಲೆಯಲ್ಲಿಯೂ ವ್ಯಕ್ತಗೊಳ್ಳುತ್ತವೆ. ಬೇರೆ ಬೇರೆ ಸಂಸ್ಥೆಗಳ ಮೂಲಕ – ಅಂದರೆ ಕುಟುಂಬ, ವ್ಯಾಪಾರ ಸ್ಥಳ, ಶಿಕ್ಷಣ, ಮಾಧ್ಯಮ, ಧರ್ಮ, ಕಾನೂನು, ಸಂಪ್ರದಾಯಗಳ ಮೂಲಕ ಅಧಿಕಾರ – ನಿಯಂತ್ರಣಗಳು ಒಂದನ್ನೊಂದು ಪುನಃಶ್ಚೇತನಗೊಳಿಸುತ್ತವೆ. ವಿರೋಧದ ಧ್ವನಿಗಳನ್ನು ಸುಮ್ಮನಾಗಿಸಲು ಪ್ರಭುತ್ವವು ಸೆನ್ಸಾರ್‌ಶಿಪ್‌ಗೆ ಹೆಚ್ಚು ಹೆಚ್ಚು ಅಧಿಕಾರವನ್ನು ನೀಡುತ್ತದೆ. ಅದೇ ಸಂದರ್ಭದಲ್ಲಿ ಕಡುಬಡವರಿಗೆ, ಮೂಲೆಗುಂಪಾದವರಿಗೆ ನೀಡುತ್ತಿರುವ ಸೇವೆಗಳನ್ನು ಪ್ರಭುತ್ವ ಹಿಂದಕ್ಕೆ ತೆಗೆದುಕೊಳ್ಳುತ್ತದೆ.

ಅಂತಾರಾಷ್ಟ್ರೀಯ ಹೆಸರಿನಲ್ಲಿ ಪ್ರಪಂಚದ ಬಂಡವಾಳಶಾಹಿ ಹಣ ಒಟ್ಟಿಗೆ ಸೇರುವುದನ್ನು, ಇಂಪೀರಿಯಲ್ ಅಧಿಕಾರ ಹಾಗೂ ಸೈನಿಕಶಕ್ತಿ ಒಟ್ಟಿಗೆಸೇರಿ ಆಯಾ ಸ್ಥಳೀಯ ಶಕ್ತಿಗಳನ್ನು ಹೆದರಿಸುವುದನ್ನು, ಜನರ ಇಚ್ಛಾಶಕ್ತಿಯ ರಾಜಕೀಯ ಸ್ತರಗಳನ್ನು ನಾಶ ಮಾಡುವುದನ್ನು, ಜನರನ್ನು ರಕ್ಷಿಸುವ ನೆಪದಲ್ಲಿ-ಮಾನವ ಹಕ್ಕುಗಳನ್ನು ರಕ್ಷಿಸುವ ಹೆಸರಿನಲ್ಲಿ, ಪ್ರಜಾಪ್ರಭುತ್ವ, ಶಾಂತಿ, ನ್ಯಾಯ ರಾಷ್ಟ್ರೀಯ ಭದ್ರತೆ – ಇವುಗಳ ಹೆಸರಿನಲ್ಲಿ ಮಿಲಿಟರೀಕರಣ, ಗೊಂದಲ ಘರ್ಷಣೆಗಳನ್ನು ಸೃಷ್ಟಿಸುವುದನ್ನು, ಅತಿಯಾದ ರಾಷ್ಟ್ರೀಯ ಸಂಸ್ಕೃತಿ-ಜನಾಂಗದ್ವೇಷ ಬೆಳೆಸುವುದನ್ನು ಪ್ರಭುತ್ವ ಯೋಜಿಸುವ ಭಯೋತ್ಪಾದನೆಯ ಯುದ್ಧಗಳು ಪ್ರಚೋದಿಸುತ್ತವೆ.

ರಾಷ್ಟ್ರೀಯ ಮಹಿಳಾ ಸಮಾವೇಶವು ಸಮಾನತೆ, ಸಾಮಾಜಿಕತೆ ನ್ಯಾಯ ಹಾಗೂ ಸಮಾನ ಅಭಿವೃದ್ಧಿ ಹೊಂದಿರುವ ಪರ್ಯಾಯ ಸಮಾಜದ ಬಗ್ಗೆ ಒಂದು ದೃಷ್ಟಿಕೋನವನ್ನು ಹೊಂದಿದೆ. ಹಿಂಸೆಯಿಂದ ಮುಕ್ತವಾದ ಸಮಾಜ, ಮಹಿಳಾ ಹಕ್ಕುಗಳನ್ನು, ಮಾನವ ಹಕ್ಕುಗಳನ್ನು, ಪ್ರಜಾಪ್ರಭುತ್ವದ ಹಿಂಸೆಗಳನ್ನು, ವೈವಿಧ್ಯವನ್ನು, ಗೌರವ, ಶಾಂತಿಯನ್ನು ಹೊಂದಿರುವ ಸಮಾಜವನ್ನು ನಾವು ಬಯಸುತ್ತೇವೆ. ಈ ಸಮಾಜವನ್ನು ಆವರಿಸಿರುವ ಮೂಲಭೂತವಾದ ಕೋಮುವಾದವನ್ನು ನಾವು

ವಿರೋಧಿಸುತ್ತೇವೆ. ಹೀಗೆ ವಿರೋಧಿಸುವಲ್ಲಿ ನಾವು ಶಾಂತಿ, ಸಮಾನತೆ, ಹಾಗೂ ನ್ಯಾಯಯುತ ರಾಜಕೀಯವನ್ನು ಎತ್ತಿ ಹಿಡಿಯುತ್ತೇವೆ.

ಮಹಿಳೆಯರ ವಿರುದ್ಧದ ಹಿಂಸೆಯ ಸವಾಲು

ಮಹಿಳೆಯರ ವಿರುದ್ಧದ ಹಿಂಸೆ – ಕಣ್ಣಿಗೆ ಕಾಣುವ ಹಾಗೂ ಕಾಣದಿರುವ ರೀತಿಯದು. ಕುಟುಂಬಗಳಿಂದ, ಸಮುದಾಯಗಳಿಂದ, ಪ್ರಭುತ್ವಗಳಿಂದ, ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಚುಡಾಯಿಸುವುದು, ವರದಕ್ಷಿಣೆ ಸಾವು, ಟ್ರ್ಯಾಫಿಕಿಂಗ್, ಹೆಣ್ಣುಶಿಶು ಹತ್ಯೆ ಇವುಗಳು ನಡೆಯುತ್ತಲೇ ಇವೆ. ಕಾನೂನು ಪ್ರಕಾರ ನಿಷೇಧಗೊಂಡಾಗ್ಯೂ ಹೆಣ್ಣುಭ್ರೂಣ ಹತ್ಯೆ ನಡೆಯುತ್ತಲೇ ಇರುತ್ತದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ಕೂಡಾ ನಡೆಯುತ್ತಿದೆ. ಸಮುದಾಯದ ಗೌರವ ರಕ್ಷಣೆಗಾಗಿ ನಡೆಯುವ ಸಾವುಗಳು ಸಾಮಾನ್ಯವಾಗಿವೆ. ಜಾತಿ ಹಾಗೂ ಕೋಮುವಾದದ ಅಧಿಕಾರ ಹೋರಾಟಗಳು ಮಹಿಳೆಯರ ಮೇಲೆ ಭೀಕರವಾದ ಲೈಂಗಿಕ ಹಿಂಸೆಯನ್ನು ನಡೆಸುತ್ತವೆ. ಹಿಂಸಾತ್ಮಕವಾದ ಪುರುಷತ್ವ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆಯಲ್ಲಿ ವ್ಯಕ್ತಗೊಳ್ಳತೊಡಗಿದೆ. ಇದರ ವಿಷವಲಯದೊಳಗೆ ಚಿಕ್ಕ ಹುಡುಗಿಯರು, ತರುಣಿಯರು, ಬಾಲೆಯರು, ವೃದ್ಧರೂ ಸೇರಿದ್ದಾರೆ. ಇವು ಹಿಂಸೆಯ ಹಲವು ಮುಖಗಳು. ಹೆಂಗಸರ ಜೊತೆ ಸಂಬಂಧ ಬೆಳೆಸುವ ಹೆಂಗಸರು ತಮ್ಮನ್ನು ಲೆಸ್‌ಬಿರ್ಯ, ದ್ವಿ–ಲಿಂಗಿಗಳು ಎಂದು ಗುರುತಿಸಿಕೊಳ್ಳುವವರು, ಲೈಂಗಿಕ ಕಾರ್ಯ ಕರ್ತೆಯರು, ಹೆಣ್ಣು–ಗಂಡು ಎಂದು ಗುರುತಿಸಲಾಗದವರು, ಲಿಂಗ ಬದಲಾಯಿಸಿಕೊಂಡ ಹಿಜ್ರಾಗಳು – ಸಹಜ, ಅಸಹಜ ಚೌಕಟ್ಟಿನೊಳಗೆ ಹೆಚ್ಚು–ಹೆಚ್ಚು ಹಿಂಸೆಗೆ ಒಳಗಾಗುತ್ತಿದ್ದಾರೆ. ಪಿತೃಪ್ರಾಧಾನ್ಯ ಹಾಗೂ ಕಡ್ಡಾಯ ಮಾಡಲಾದ ಗಂಡು–ಹೆಣ್ಣಿನ ಸಂಬಂಧಕ್ಕೆ ಪರ್ಯಾಯ ಲೈಂಗಿಕತೆಯ ಆತಂಕ ಉಂಟಾಗುತ್ತದೆ ಎಂದು ನೋಡಲಾಗುತ್ತದೆ. ಕಾನೂನು ಈ ಪರ್ಯಾಯ ಲೈಂಗಿಕತೆಯನ್ನು ಅಪರಾಧಗಳು ಎಂದು ಪರಿಗಣಿಸುತ್ತದೆ. ಈ ರೀತಿಯ ಕಾನೂನುಗಳನ್ನು ತಕ್ಷಣವೇ ಹಿಂದಕ್ಕೆ ತೆಗೆದುಕೊಳ್ಳಬೇಕು. ಹಾಗೆಯೇ ಲೈಂಗಿಕ ಹಿಂಸೆಯ ಕುರಿತಾದ ಇತರ ಕಾನೂನುಗಳೂ ಕೂಡಾ ತಕ್ಷಣವೇ ತಿದ್ದುಪಡಿಯಾಗಬೇಕಿವೆ.

ಇಂದು ಪ್ರಭುತ್ವ ಹಾಗೂ ಸಮಾಜಗಳು ಸಮಸ್ಯೆಗಳನ್ನು ಗುರುತಿಸುತ್ತಿವೆ. ಕಾನೂನು ನೆರವು, ಕ್ರೈಸಿಸ್‌ನಲ್ಲಿ ಮಧ್ಯ ಪ್ರವೇಶಿಕೆ, ಸಹಾಯ ಸಂಸ್ಥೆಗಳ ನೆರವು ಹೆಂಗಸರಿಗೆ ದೊರಕುವಂತೆ ಮಾಡಲಾಗಿದೆ. ಆದಾಗ್ಯೂ ಮಹಿಳೆಯರ ವಿರುದ್ಧದ ಹಿಂಸೆ ಹೆಚ್ಚಾಗುತ್ತಲೇ ಇದೆ. ಕಾನೂನುಗಳಲ್ಲಿ ಅನೇಕ ಬದಲಾವಣೆಗಳಾಗಿ ಕೂಡಾ, ಅವುಗಳನ್ನು ಜಾರಿಗೆ ತರುವಲ್ಲಿ ಸಾಮಾಜಿಕ ಹಾಗೂ ಪಿತೃಪ್ರಧಾನದ ಸಂಸ್ಥೆಗಳು ಅನೇಕ ತೊಂದರೆಗಳನ್ನು ಒಡ್ಡುವುದನ್ನು ಕಾಣುತ್ತೇವೆ. ನಮ್ಮ ಮುಂದಿರುವ ದಾರಿ ದೂರ, ಆದರೂ ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಎಲ್ಲಾ ರೂಪಗಳನ್ನು ವಿರೋಧಿಸುವುದನ್ನು ನಾವು ಮುಂದುವರಿಸುತ್ತೇವೆ.

ಕೋಮುವಾದ, ಮತಾಂಧತೆ ಹಾಗೂ ಸಂಪ್ರದಾಯಗಳ ಸವಾಲು

ಬೆಳೆಯುತ್ತಿರುವ ರಾಷ್ಟ್ರೀಯ ಕಲ್ಪನೆಯ ಜೊತೆಗೆ ಧಾರ್ಮಿಕ ಮೂಲಭೂತವಾದಿತ್ವ ಹಾಗೂ ಫ್ಯಾಸಿಸ್ಟ್ ಸಂಸ್ಕೃತಿಗಳು ಹೆಚ್ಚು ಹೆಚ್ಚಾಗಿ ಬೆಳೆಯುತ್ತಿವೆ. ಇವು ರಾಜಕೀಯ ವೇದಿಕೆಯನ್ನು, ನಾಗರಿಕ ಸಮಾಜವನ್ನು ದಿಕ್ಕು ತಪ್ಪಿಸುತ್ತಿವೆ. ಕಾನೂನು, ಮಾಧ್ಯಮ, ಶಿಕ್ಷಣದಲ್ಲಿ ಇವು ತಳುಕು ಹಾಕಿಕೊಂಡಿವೆ. ಅಲ್ಪ ಸಂಖ್ಯಾತರ ಮೇಲೆ ದಾಳಿ, ದಲಿತರು ಹಾಗೂ ಮೂಲೆಗುಂಪಾದ ಇತರ ಜಾತಿಗಳ ಮೇಲೆ, ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳು ಪ್ರಭುತ್ವದ ನೆರಳಿನಲ್ಲಿಯೇ ನಡೆಯುತ್ತಿವೆ. ಹೀಗಾಗಿ ಇವು ಸಾವಿನಲ್ಲಿ, ಅಂಗಾಂಗಗಳ ಕತ್ತರಿಸುವಿಕೆಯಲ್ಲಿ, ಭಯದ ವಾತಾವರಣದಲ್ಲಿ, ಅಸ್ಥಿರತೆಯಲ್ಲಿ ಹಾಗೂ ಸಾವಿರಾರು ಜನರನ್ನು ಭೀಭತ್ಸವಾಗಿ ಅವರ ಮನೆಗಳಿಂದ ಸ್ಥಳಾಂತರಿಸುವಲ್ಲಿ ಕೊನೆಗೊಂಡಿವೆ. ಆರ್ಥಿಕ ಹಾಗೂ ಸಾಮಾಜಿಕ ದಿಗ್ಬಂಧನಗಳು ಅವರ ಬದುಕುಗಳನ್ನು ಶೋಚನೀಯವಾಗಿಸಿವೆ. ನ್ಯಾಯವ್ಯವಸ್ಥೆ ಇವರಿಗೆ ನ್ಯಾಯ ದೊರಕಿಸುವಲ್ಲಿ ಬಹಳ ಸಂದರ್ಭದಲ್ಲಿ ಸೋತಿದೆ.

ಕೋಮುವಾದದ ನಿಯಂತ್ರಣಗಳು ಸಮಾಜ ಹಾಗೂ ರಾಜಕೀಯದಲ್ಲಿ ಹೆಚ್ಚಾಗುತ್ತಾ ಹೋದ ಹಾಗೆ ಇವು ಮಹಿಳೆಯರ ಮೇಲೆ ವಿಪರೀತ ಪರಿಣಾಮಗಳನ್ನು ಉಂಟುಮಾಡಿವೆ. ಮಹಿಳೆಯರ ಬದುಕಿನ ಮೇಲಿನ ಸ್ವಾತಂತ್ರ್ಯ, ಹೋಗು–ಬರುವಿಕೆಯ ಮೇಲೆ ಕುಟುಂಬದ ನಿಯಂತ್ರಣ ಹಾಗೂ ಸಮುದಾಯದ ನಿಯಂತ್ರಣಗಳು ಹೆಚ್ಚಾಗಿವೆ. ಇಂತಹ ಘರ್ಷಣೆಯ ಸಂದರ್ಭದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಹಿಂಸೆ ಇನ್ನೂ ಹೆಚ್ಚು ಗಂಭೀರ ಸ್ವರೂಪದ ಪ್ರಕ್ರಿಯೆಯಾಗಿದೆ. ಜೊತೆ ಜೊತೆಗೆಯೇ ಸಂಪ್ರದಾಯನಿಷ್ಠೆಯ ಅಲೆಗಳು, ಹೆಚ್ಚಾಗಿ ನೈತಿಕತೆಯ ಪೊಲೀಸಿಂಗ್ ನಡೆಯುತ್ತಿದೆ. ಮಹಿಳಾ ವಿರೋಧಿ ವೈಯಕ್ತಿಕ ಕಾನೂನುಗಳಿಂದ, ಸಂಪ್ರದಾಯಗಳಿಂದ, ಜಾತಿ ಸಮುದಾಯ, ಪಂಚಾಯತಿಗಳಿಂದ ಮಹಿಳೆಯರ ಮೇಲಿನ ನಿಯಂತ್ರಣಗಳು ಹೆಚ್ಚುತ್ತಿವೆ. ಈ ನಿಯಂತ್ರಣ ಎಷ್ಟರಮಟ್ಟಿಗೆ ಇದೆ ಅಂದರೆ – ಸಮುದಾಯದ ಒಳಗೆ ಹಾಗೂ ಆಚೆ ಮಹಿಳೆಯರಿಗೆ ವಿರೋಧವಿದೆ. ಚರ್ಚೆ, ವಿಚಾರ ವಿನಿಮಯ ಮಾಡಿಕೊಳ್ಳಲು ಸಹ ಇವರಿಗಿರುವ ಅವಕಾಶ ನಾಶವಾಗುತ್ತಿದೆ. ಸೆಕ್ಯುಲರ್ ಆಗಿರತಕ್ಕಂತಹ ದೇಶದ ಹಾಗೂ ವಿವಿಧ ಸಾಂಸ್ಕೃತಿಕ ಹೆಣಿಗೆಯನ್ನು ಉಳಿಸಬೇಕೆನ್ನುವುದು ನಮ್ಮ ನಂಬಿಕೆಯಾಗಿದೆ. ದ್ವೇಷದ ರಾಜಕೀಯ ಹಾಗೂ ಅದಕ್ಕೆ ನೀರೆರೆಯುವ ಒತ್ತಡಗಳನ್ನು ನಾವು ಬದಲಾಯಿಸಬೇಕಾಗಿದೆ.

ಜಾಗತೀಕರಣ ಮತ್ತು ಅಭಿವೃದ್ಧಿಯ ಮೇಲೆ ಅದರ ಪ್ರಭಾವವನ್ನು ಎದುರಿಸುವ ಸವಾಲು

ಆರ್ಥಿಕ ಉದಾರೀಕರಣ ದಶಕಗಳಿಂದಲೂ ನಡೆಯುತ್ತಿರುವುದರಿಂದ ಪ್ರಭುತ್ವವು ಮುಖ್ಯ ಸೇವೆಗಳಾದ – ಆರೋಗ್ಯ ಸೇವೆ,

ವಿದ್ಯುಚ್ಛಕ್ತಿ ಹಾಗೂ ನೀರಿನ ಸೌಕರ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದೆ. ಈ ಮೂಲಭೂತ ಸೌಕರ್ಯಗಳು ಖಾಸಗೀಕರಣಗೊಳ್ಳುತ್ತಿದ್ದ ಹಾಗೆಯೇ ಶ್ರೀಮಂತ ಹಾಗೂ ಬಡವರ ಮಧ್ಯದ ಅಂತರ ಇನ್ನೂ ಹೆಚ್ಚಾಗುತ್ತಿದೆ. ಹೆಚ್ಚು ಜನರಿಗೆ ಈ ಮುಖ್ಯ ಸೇವೆಗಳೇ ಎಟುಕುತ್ತಿಲ್ಲ – ವಿಶೇಷವಾಗಿ ಮಹಿಳೆಯರಿಗೆ ಹಾಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಪ್ರಾಪ್ತವಾಗುತ್ತಿಲ್ಲ. ಮಹಿಳೆಯರು ಹೆಚ್ಚು ಹೆಚ್ಚು ವಲಸೆ ಹೋಗತೊಡಗಿದ್ದಾರೆ. ಮನೆ, ಮಾರು ಕಳೆದುಕೊಳ್ಳತೊಡಗಿದ್ದಾರೆ. ಪ್ರಾಕೃತಿಕ ಸಂಪತ್ತನ್ನು ಮಿತಿಮೀರಿ ಬಳಸಲಾಗುತ್ತಿದೆ. ಅವು ಮಲಿನವಾಗಿವೆ, ಕಾಡುಗಳು ನಾಶವಾಗಿವೆ, ನದಿಗಳನ್ನು ದುಬಾರಿ ಖರ್ಚುಗಳಲ್ಲಿ ದೊಡ್ಡ ದೊಡ್ಡ ಪ್ರಮಾಣದ ಪ್ರಗತಿಯ ಮಾದರಿಗಳನ್ನಾಗಿಸಿಕೊಳ್ಳಲಾಗಿದೆ. ಜೊತೆಗೆ ಪ್ರವಾಸೋದ್ಯಮ ಕೂಡಾ. ಇದರಿಂದಾಗಿ ಸಾವಿರಾರು, ಲಕ್ಷಾಂತರ ಜನ ಪ್ರಭುತ್ವದಿಂದ ಸ್ಥಳಾಂತರಿಸಲ್ಪಟ್ಟಿದ್ದಾರೆ. ಅವರ ಬದುಕುಗಳು ನಾಶವಾಗಿವೆ. ಅವರ ಜೀವನಾಧಾರಗಳು, ಅವರ ಇಡೀ ಸಮುದಾಯ ನಾಶವಾಗಿಲ್ಪಟ್ಟಿದೆ. ಕಾಡಿನ ಸಂಪನ್ಮೂಲಗಳ ನಿಯಂತ್ರಣ, ಅಧಿಕಾರ ಪ್ರಭುತ್ವದ ಕೈಯಲ್ಲಿ ಕೇಂದ್ರೀಕರಿಸ್ಪಟ್ಟಿದ್ದು, ಇವುಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ, ಜೀವನಾಧಾರಿತ ಉಪಯೋಗವನ್ನೇ ಸಂಪೂರ್ಣವಾಗಿ ನಾಶ ಮಾಡಲಾಗುತ್ತಿದೆ. ನಗರೀಕರಣ ಹಾಗೂ ಕೈಗಾರಿಕೀಕರಣ ಹೆಚ್ಚಾದ ಹಾಗೆ ಮಹಿಳೆಯರೇ ಇದರ ಭಾರವನ್ನು ಹೆಚ್ಚಾಗಿ ಹೊರುವುದು. ಶ್ರಮಕ್ಕೆ ಸಂಬಂಧಪಟ್ಟ ಕಾನೂನುಗಳು ನಾಶವಾದ ಹಾಗೆ, ಅಸಂಘಟಿತ ಕ್ಷೇತ್ರ ಬೆಳೆದ ಹಾಗೆ ಮಹಿಳೆಯರು ಈ ಕ್ಷೇತ್ರದಲ್ಲಿ ಕೆಲಸ ಮಾಡುವುದು ಹೆಚ್ಚಾಗಿ, ಅವರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ಬಡವರನ್ನು, ಮೂಲೆ ಗುಂಪಾದವರನ್ನು ವಿಶೇಷವಾಗಿ ಹೆಂಗಸರನ್ನು ಇನ್ನಷ್ಟು ನಾಶಮಾಡುವ ಆರ್ಥಿಕನೀತಿಯನ್ನು ನಾವು ವಿರೋಧಿಸುತ್ತೇವೆ. ಬಟ್ಟೆ, ವಸತಿ, ಆರೋಗ್ಯ, ಆಹಾರಭದ್ರತೆ ಮತ್ತು ಎಲ್ಲರಿಗೂ ಶಿಕ್ಷಣ ನೀಡಲೇಬೇಕೆಂದು ನಾವು ಒತ್ತಾಯಿಸುತ್ತೇವೆ. ರಕ್ಷಣೆಯ ಹೆಸರಿನಲ್ಲಿ ಸೈನ್ಯದ ಮೇಲೆ ಖರ್ಚು ಮಾಡುವ ಹಣವನ್ನು ಕಡಿಮೆ ಮಾಡಬೇಕಿದೆ. ಪರಿಸರ ನಾಶಮಾಡುವುದನ್ನು ನಾವು ವಿರೋಧಿಸುತ್ತೇವೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾರ್ಪೊರೇಟ್‌ನವರು ಪರಿಸರ ನಾಶಕ್ಕೆ, ಈ ಸಮಾಜಕ್ಕೆ, ಸಮುದಾಯಕ್ಕೆ ಹೊಣೆಗಾರರೆಂದು ನಾವು ಹೇಳುತ್ತೇವೆ. ಜನರು ಬದುಕಲು ಆಧಾರವಾಗುವಂಥ ಆರ್ಥಿಕ ವ್ಯವಸ್ಥೆಯನ್ನು ನಾವು ಬೆಂಬಲಿಸುತ್ತೇವೆ. ಇಂತಹ ಆರ್ಥಿಕ ವ್ಯವಸ್ಥೆಗಳಲ್ಲಿ ಸಮಾಜದ ಎಲ್ಲಾ ಜನರಿಗೆ ಈ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ, ಆರ್ಥಿಕ ಯೋಜನೆಗಳಲ್ಲಿ ಭಾಗವಹಿಸುವ, ಲಾಭಗಳನ್ನು ಎಲ್ಲರೂ ಹಂಚಿಕೊಳ್ಳುವ ಹಕ್ಕಿರಬೇಕೆಂಬುದು ನಮ್ಮ ನಂಬಿಕೆಯಾಗಿದೆ.

ಒತ್ತಾಯದ ಜನಸಂಖ್ಯಾ ಯೋಜನೆಗಳ ಸವಾಲು

ಜನಸಂಖ್ಯಾ ಗುರಿಗಳನ್ನು ಸಾಧಿಸುವಲ್ಲಿ ಮಹಿಳೆಯರನ್ನು ಮಾತ್ರ ಸಂತಾನಾಭಿವೃದ್ಧಿಯ ಜೀವಿಗಳು ಎಂದು ತಿಳಿಯುವುದನ್ನು ನಾವು ವಿರೋಧಿಸುತ್ತೇವೆ. ಇದಕ್ಕಾಗಿ ಪ್ರಭುತ್ವ ಹಾಗೂ ಇತರ ಸಂಸ್ಥೆಗಳು ತಂತ್ರಗಾರಿಕೆ ಮಾಡುವುದನ್ನು ಕೂಡಾ ನಾವು ವಿರೋಧಿಸುತ್ತೇವೆ. ಔಷಧಿ ಅಂಗಡಿಗಳು ಹಾಗೂ ಸರ್ಕಾರದ ಯೋಜಿತ ಸಂಸ್ಥೆಗಳ ಜನಸಂಖ್ಯಾ ನಿಯಂತ್ರಣ ಯೋಜನೆಯನ್ನು ನಾವು ವಿರೋಧಿಸುತ್ತೇವೆ. ಇವರು ಆರೋಗ್ಯಕ್ಕೆ ಮಾರಕವಾದ ಗರ್ಭನಿರೋಧಕಗಳನ್ನು ತಮ್ಮ ಕಾರ್ಯಕ್ರಮಗಳಲ್ಲಿ ಹಾಗೂ ಪೇಟೆಯ ಮೂಲಕ ಮಾರಾಟ ಮಾಡುವುದನ್ನು ಉತ್ತೇಜಿಸುತ್ತಿದ್ದಾರೆ.

ಇಬ್ಬರು ಮಕ್ಕಳು ಇರುವಂತೆ ಪಂಚಾಯಿತಿಯ ಪ್ರತಿನಿಧಿಗಳ ಮೇಲೆ ಒತ್ತಡ ಹೇರುವ ಯೋಜನೆಗಳು ಅಥವಾ ಇನ್ನು ಕೆಲವು ಕಡೆ ಒಟ್ಟಾಗಿ ಜನರಮೇಲೆ ಹೇರಿರುವ ಇಬ್ಬರು ಮಕ್ಕಳ ಜನಸಂಖ್ಯಾ ಯೋಜನೆಯನ್ನು ನಾವು ವಿರೋಧಿಸುತ್ತೇವೆ. ಇಬ್ಬರು ಮಕ್ಕಳಿಗಿಂತ ಜಾಸ್ತಿ ಮಕ್ಕಳಿದ್ದರೆ – ಇವರಿಗೆ ನೀರಾವರಿ ಯೋಜನೆಯ ಸೌಲಭ್ಯವನ್ನು ಪಡೆಯುವ ಹಕ್ಕಿರುವುದಿಲ್ಲ. ಇದು ಪ್ರಜಾಪ್ರಭುತ್ವವಲ್ಲದ, ಒಪ್ಪಿಕೊಳ್ಳಲಾಗದ ಯೋಜನೆ ಎಂದು ನಾವು ತಿಳಿಯುತ್ತೇವೆ. ಈ ರೀತಿಯ ಯೋಜನೆಗಳು ಮುಖ್ಯವಾಗಿ ಬಡ ಹಾಗೂ ಸಾಂಪ್ರಾದಾಯಿಕವಾಗಿ ತುಳಿತಕ್ಕೊಳಗಾದ ಮಹಿಳೆಯರನ್ನು ದಂಡಿಸುತ್ತವೆ. ಈ ರೀತಿಯ ಕಾನೂನುಗಳು ಈ ವ್ಯವಸ್ಥೆಯಲ್ಲಿ ಮಹಿಳೆಯರು ಸಮಾನವಾಗಿ ಸ್ಪರ್ಧಿಸುವುದನ್ನು ನಿರಾಕರಿಸುತ್ತವೆ ಹಾಗೂ ಹೆಣ್ಣು ಶಿಶುಹತ್ಯೆಗೆ ಇಂಬುಕೊಡುತ್ತವೆ. ಭಾರತದ ಅಥವಾ ಇತರ ದೇಶದ ಕಂಪನಿಗಳು ಅಥವಾ ಖಾಸಗಿ, ಸರ್ಕಾರಿ ಸಂಸ್ಥೆಗಳು ಭಾರತದ ಮಹಿಳೆಯರನ್ನು ಸಂಶೋಧನೆಯ ವಸ್ತುವಾಗಿ ಬಳಸುವುದನ್ನು ವಿರೋಧಿಸುತ್ತೇವೆ. ಮಹಿಳೆಯರಿಗೆ ಉತ್ತಮ ಆರೋಗ್ಯ ಹಾಗೂ ಹುಟ್ಟನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಆಯ್ಕೆಗಳು ಮಹಿಳೆಯರಿಗೆ ಇರಬೇಕೆಂದು ನಾವು ಪ್ರತಿಪಾದಿಸುತ್ತೇವೆ.

ಪ್ರಭುತ್ವದ ಹಿಂಸೆ ಹಾಗೂ ಹುನ್ನಾರ

ಕಳೆದ ಕೆಲವು ದಶಕಗಳಿಂದ ಮೇಲ್‌ಜಾತಿ, ಪಿತೃಪ್ರಧಾನತೆ ಹಾಗೂ ಬಂಡವಾಳಶಾಹಿಗಳಿಂದ ಕೂಡಿರುವ ಪ್ರಭುತ್ವದ ಮೇಲೆ ಮಹಿಳಾ ಚಳವಳಿಯ ಬೇಡಿಕೆಗಳಿಗೆ ಪ್ರತಿಕ್ರಿಯಿಸಬೇಕಾದ ಒತ್ತಡವಿದೆ. ಇವುಗಳನ್ನು ಜಾರಿಗೆ ತರುವಲ್ಲಿ ಪ್ರಭುತ್ವ ಸೋತಿದ್ದರೂ ಕೂಡಾ ಇರುವ ವ್ಯವಸ್ಥೆಯನ್ನು ಕಾಪಾಡಿಕೊಂಡು, ಹೋಗುವುದರ ಜೊತೆಗೆ, ನಮ್ಮ ವಿಚಾರಗಳನ್ನು ಹಾಗೂ ನಮ್ಮ ಭಾಷೆಯನ್ನು Co-opt ಮಾಡಿಕೊಂಡಿದೆ. ಅನೇಕ ವಿಶೇಷ ಯೋಜನೆಗಳ ಮೂಲಕ, ಸರ್ಕಾರದ ಹಂತದಲ್ಲಿ ಮೀಸಲಾತಿ ನೀಡುವ ಮೂಲಕ ಮಹಿಳೆಯರನ್ನು 'ಸಬಲ'ರನ್ನಾಗಿಸುವ ಸರ್ಕಾರದ ಪ್ರಯತ್ನಗಳು

ಗ್ರಾಸ್‌ರೂಟ್ ಹಂತದಲ್ಲಾಗಲೀ, ಸರ್ಕಾರ ಅಥವಾ ರಾಜಕೀಯ ಪಕ್ಷದಲ್ಲಾಗಲೀ ಯಾವ ಬದಲಾವಣೆಯನ್ನೂ ತಂದಿಲ್ಲ. ಸ್ವ-ಸಹಾಯ ಗುಂಪುಗಳನ್ನು ಸರ್ಕಾರ ಹೆಂಗಸರ ಸಬಲತೆಯ ಚಿಹ್ನೆಯಾಗಿ, ಬಡತನದ ನಿವಾರಣೆಯ ಅಂಶವಾಗಿ ತೋರಿಸುವುದನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ ಪ್ರಭುತ್ವ ಮಹಿಳೆಯರ ಶೋಷಣೆಯ ಮೂಲವನ್ನು ಕುರಿತು ಮಾತನಾಡುವುದಿಲ್ಲ. ಜೊತೆಗೆ ಬಡ ಮಹಿಳೆಯರ ಮೇಲೆ .ಬಡತನವನ್ನು ಹೋಗಲಾಡಿಸುವ ಜವಾಬ್ದಾರಿಯನ್ನು ಹೊರಿಸುತ್ತದೆ.

ಪ್ರಭುತ್ವದ ಸೈನ್ಯಗಳು ನಾಗರಿಕರನ್ನು ರಕ್ಷಿಸಬೇಕು. ಆದರೆ ಇವು ಅತ್ಯಾಚಾರ, ಲೈಂಗಿಕ ದೌರ್ಜನ್ಯವನ್ನು ನಡೆಸುತ್ತಲೇ ಇರುತ್ತವೆ. ಇವು ಜನರನ್ನು ಭಯಗ್ರಸ್ತರನ್ನಾಗಿಸುತ್ತವೆ. ಜನಸಂಖ್ಯಾ ನಿಯಂತ್ರಣ ಮಾಡುತ್ತವೆ. ಕಾಶ್ಮೀರದಲ್ಲಿ ಅಥವಾ ನಾರ್ತ್-ಈಸ್ಟ್‌ನಲ್ಲಿ ಸೈನಿಕರಿಂದ ನಡೆದ ಗುಂಪು ಅತ್ಯಾಚಾರಗಳು ಅಥವಾ ಗುಜರಾತಿನಲ್ಲಿ ಮುಸ್ಲಿಂ ಮಹಿಳೆಯರ ಮೇಲೆ ಹಿಂದುತ್ವವಾದ ನಡೆಸಿದ ಹಿಂಸೆ ಇವು ಕೆಲವು ಉದಾಹರಣೆಗಳು ಮಾತ್ರ. ಶಾಂತಿ, ರಾಷ್ಟ್ರೀಯ ಭದ್ರತೆ ಅಥವಾ ವಿಶ್ವದ ಭಯೋತ್ಪಾದನೆಯ ವಿರುದ್ಧದ ಯುದ್ಧ - ಈ ಹೆಸರಿನಲ್ಲಿ ಪುರುಷ ಅಥವಾ ಮಹಿಳೆಯರ ಮೇಲೆ ನಡೆಸುವ ಹಿಂಸೆಯನ್ನು ನಾವು ವಿರೋಧಿಸುತ್ತೇವೆ. ಇಂದು ಪ್ರಭುತ್ವವು ಜನಪರ ಚಳವಳಿ ಹತ್ತಿಕ್ಕಲು ಹೆಚ್ಚು - ಹೆಚ್ಚು ಹಿಂಸಾತ್ಮಕವಾಗಿದೆ. ಹಿಂಸೆಯ ಮೂಲಕ ಭಿನ್ನ-ಭಿನ್ನ ಅಭಿಪ್ರಾಯಗಳನ್ನು ಸೆನ್ಸಾರ್ ಮಾಡುತ್ತಿದೆ. ಪ್ರತಿಭಟನೆಯ ಧ್ವನಿಯನ್ನು ಹತ್ತಿಕ್ಕಲಾಗುತ್ತಿದೆ. ಯಾವುದೇ ಸಮಸ್ಯೆಗಳಿಗೆ ಪ್ರಜಾಪ್ರಭುತ್ವದ ದಾರಿಯಲ್ಲಿ ಉತ್ತರಗಳನ್ನು ಹುಡುಕಲು ಪ್ರಭುತ್ವ ಪ್ರಯತ್ನಿಸುತ್ತಿಲ್ಲ. ಅತ್ಯಂತ ಭೀಕರ ಕಾನೂನುಗಳಾದ ಆರ್ಮ್ಡ್ ಫೋರ್ಸ್ ಆ್ಯಕ್ಟ್, ಭಯೋತ್ಪಾದನೆಯನ್ನು ತಡೆಗಟ್ಟುವ ಆ್ಯಕ್ಟ್, ಕಾನೂನುಬಾಹಿರ ಚಟುವಟಿಕೆ ನಿರ್ಬಂಧಿಸುವ ಆ್ಯಕ್ಟ್, ರಕ್ಷಣೆಯ ಆ್ಯಕ್ಟ್, -ಇವುಗಳನ್ನು ನಾವು ವಿರೋಧಿಸುತ್ತೇವೆ. ಈ ಕಾನೂನುಗಳು ಪ್ರಭುತ್ವವನ್ನು ಬಲಗೊಳಿಸುತ್ತವೆ. ಸೈನಿಕ ಪಡೆಯನ್ನು, ಅವುಗಳ ಶಕ್ತಿಯನ್ನು ಬಲಪಡಿಸುತ್ತವೆ, ಮಾನವ ಹಕ್ಕುಗಳನ್ನು ಭಯಂಕರ ರೀತಿಯಲ್ಲಿ ನಿರ್ಬಂಧಿಸುತ್ತವೆ. ಈ ರೀತಿಯ ಕಾನೂನುಗಳನ್ನು ತಕ್ಷಣವೇ ತೆಗೆದು ಹಾಕಬೇಕು.

ವೈವಿಧ್ಯದ ದೃಢೀಕರಣ, ಒಡೆಯುವಿಕೆಯ ನಿರಾಕರಣ

ಮಹಿಳೆಯರಾಗಿ ನಾವು ಸಮಾನ ಆಸಕ್ತಿ, ಗುರಿಗಳನ್ನು ಹಂಚಿಕೊಳ್ಳುತ್ತೇವೆ. ಹಾಗಾಗಿ ನಾವು ಒಟ್ಟಾಗಿ ಹೋರಾಟಕ್ಕೆ ಮುಂದಾಗಿದ್ದೇವೆ. ಜಾತಿ, ರಾಷ್ಟ್ರ, ವರ್ಗ, ಧರ್ಮ, ಸ್ಥಳೀಯತೆ, ಲೈಂಗಿಕತೆ, ಸಾಮರ್ಥ್ಯ, ಅಸಾಮರ್ಥ್ಯಗಳು ಸಾಮಾಜಿಕ ಆಯಾಮಗಳಲ್ಲಿ ಬಲವಾಗಿ ಹೆಣೆದುಕೊಂಡಿದ್ದು, ನಮ್ಮಲ್ಲಿ ಭಿನ್ನ ಭಿನ್ನರೀತಿಯ ಅಸ್ತಿತ್ವವನ್ನು ರೂಢಿಸಿವೆ. ಹಾಗಾಗಿ ನಮ್ಮ ಅಸ್ತಿತ್ವದ ಗುರುತಿಸುವಿಕೆಯಲ್ಲಿ ಅನೇಕ ರೀತಿಯ ವೈವಿಧ್ಯಗಳನ್ನು ಹುಟ್ಟುಹಾಕಿವೆ. ಆದಾಗ್ಯೂ ನಾವು ಈ ವೈವಿಧ್ಯತೆಗಳನ್ನು ಗುರುತಿಸಲು ಬದ್ಧರಾಗಿದ್ದೇವೆ. ವೈವಿಧ್ಯಗಳಿಂದಲೇ ಹುಟ್ಟುವ ಅನ್ಯಾಯಗಳಿಗೆ ನ್ಯಾಯ ಕೇಳುವಾಗಲೂ ಸಹ ನಾವು ವೈವಿಧ್ಯಕ್ಕೆ ಬದ್ಧರಾಗಿಯೇ ಉಳಿದಿರುತ್ತೇವೆ. ಸ್ಪಷ್ಟವಾಗಿ ಹೇಳಬೇಕೆಂದರೆ, ಯಾರ ಅಸ್ತಿತ್ವಗಳು ಮೂಲೆಗುಂಪಾಗಿವೆಯೋ ಅವರಿಗೆ, ಅಂದರೆ ದಲಿತರು, ದುಡಿಯುವ ಮಹಿಳೆಯರು, ಧಾರ್ಮಿಕ ಅಲ್ಪಸಂಖ್ಯಾತರು, ಲೆಸ್‌ಬಿಯರ್ನ್ಸ್, ಟ್ರ್ಯಾನ್ಸ್‌ಜೆಂಡರ್, ವೇಶ್ಯೆಯರು ಅಂಗಹೀನತೆ ಉಳ್ಳ ಮಹಿಳೆಯರು ಹಾಗೂ ಮೂಲೆಗುಂಪಾದ ಜನರ ಹೋರಾಟಗಳನ್ನು ನಾವು ಬೆಂಬಲಿಸುತ್ತೇವೆ.

ಮಹಿಳೆಯರಾದ ನಮ್ಮ ಬದುಕಿನ ಬಗ್ಗೆ, ನಮ್ಮ ದೇಹಗಳ ಬಗ್ಗೆ, ನಮ್ಮ ಲೈಂಗಿಕತೆ ಹಾಗೂ ನಮ್ಮ ಸಂಬಂಧಗಳ ಬಗ್ಗೆ ನಮಗೆ ಆಯ್ಕೆಯ ಸ್ವಾತಂತ್ರ್ಯ ಇರಬೇಕೆಂದು ನಾವು ನಂಬುತ್ತೇವೆ. ಈ ಆಯ್ಕೆಗಳು ಬದಲಾಗುತ್ತಿರುತ್ತವೆ ಎಂಬುದನ್ನು ನಾವು ಗುರುತಿಸುತ್ತೇವೆ. ವಿಭಿನ್ನ ಆಯ್ಕೆಗಳನ್ನು ಗುರುತಿಸಲು ಹಾಗೂ ಅದಕ್ಕೆ ಸ್ಥಳಾವಕಾಶ ನೀಡಲು ನಾವು ಬದ್ಧರಾಗಿದ್ದೇವೆ. ಅಂತಹ ಆಯ್ಕೆಗಳು ಅರ್ಥಪೂರ್ಣವಾಗಿ ವಾಸ್ತವಕ್ಕೆ ತರಲು ಬೇಕಾಗುವ ಬೆಂಬಲ, ರಾಚನಿಕ ವ್ಯವಸ್ಥೆಯನ್ನು ರೂಪಿಸಲು ನಾವು ಬದ್ಧರಾಗಿದ್ದೇವೆ.

ನಮ್ಮ ರಾಜಕೀಯದ ಹಾಗೂ ಹೋರಾಟದ ಅಭಿವ್ಯಕ್ತಿಗಳನ್ನು ಗುರುತಿಸಲು ನಾವು ಬದ್ಧರಾಗಿದ್ದೇವೆ. ನ್ಯಾಯಕ್ಕಾಗಿ ಹೋರಾಡುವ ಎಲ್ಲರನ್ನೂ ನಾವು ಬೆಂಬಲಿಸುತ್ತೇವೆ. ಮುಖ್ಯವಾಗಿ ಅಧಿಕಾರ ಹಾಗೂ ರಾಜಕೀಯದಿಂದ ನಾವು ಸ್ವಾಯತ್ತವಾಗಿ ಉಳಿಯುವ ದೃಷ್ಟಿಕೋನವನ್ನು ಹೊಂದಿದ್ದೇವೆ.

ರಾಷ್ಟ್ರೀಯ ಮಹಿಳಾ ಸಮಾವೇಶ ಶೋಷಣೆಯ ವಿರುದ್ಧ ಹೋರಾಡುವವರನ್ನು, ಸಮಾನತೆಗಾಗಿ ಹೋರಾಡುವವರನ್ನು, ನ್ಯಾಯಕ್ಕಾಗಿ ಹೋರಾಡುವವರನ್ನು, ವಿಮೋಚನೆಗಾಗಿ ಹೋರಾಡುವ ಎಲ್ಲರನ್ನೂ ಸ್ವಾಗತಿಸುತ್ತದೆ. ನಾವು ನಮ್ಮ ವೈವಿಧ್ಯಗಳನ್ನು ದೃಢೀಕರಿಸುತ್ತೇವೆ, ಒಡೆಯುವಿಕೆಯನ್ನು ನಿರಾಕರಿಸುತ್ತೇವೆ. ನ್ಯಾಯ ಹಾಗೂ ಶಾಂತಿಯ ಬೃಹತ್ತರವಾದ ದೃಷ್ಟಿಕೋನಕ್ಕಾಗಿ ನಾವು ಎಲ್ಲರನ್ನೂ ಸ್ವಾಗತಿಸುತ್ತೇವೆ. □

ಪ್ರತಿ ತಿಂಗಳು ಕೊನೆಯ ಶನಿವಾರ ಮಾನಸದ ಕಛೇರಿಯಲ್ಲಿ ಮಧ್ಯಾಹ್ನ 3 ಗಂಟೆಗೆ ಸಭೆ ನಡೆಸಲಾಗುವುದು. ಆಸಕ್ತ ಮಹಿಳೆಯರು ಈ ಸಭೆಯಲ್ಲಿ ಭಾಗವಹಿಸಬಹುದಾಗಿದೆ.

ಸಂಪಾದಕ ಮಂಡಳಿ

ಸೀರೆ

ಎಲ್ಲ ಕಡೆ ಸರಬರ ಸದ್ದು
ಬೆಂಗಾಲ ಬನಾರಸ್ ಕೊಯಮತ್ತೂರು
ಕಾಂಜೀವರಂ ಮೊಳಕಾಲ್ಮೂರು
ಇಳಕಲ್ ಸೀರೆಯ ತೋಪಿನ ಸೆರಗು
ಬನಾರಸಿಯ ಜರಿಯ ಮೆರಗು
ಗದ್ವಾಲ ಮೈಸೂರು ಸಿಲ್ಕ್ ಅಂಚು
ಫಳ ಫಳ ಹೊಳೆಯುವ ಮಿಂಚು

'ಸೀರೆ ಉಡುವುದು ಒಂದು ಕಲೆ'
ಅಜ್ಜಿ ಉವಾಚ
ಹದಿನಾರು ಮೊಳದ ಚಂದ ಸೀರೆ
ಸೊಂಟ ಕಾಲು ಭುಜಗಳಲಿ ವಾಲಾಟ
ಬೆನ್ನ ಹಿಂದೆ ವಿರಾಮ
ಜಾರದಂತೆ ಕೈಯ ಬಿಗಿತ
ಬಣ್ಣ ಕುಸುರಿಗಳ ಮೋಹಕತೆ
ರೇಷ್ಮೆ ಬೆಡಗಿನ ವೈಯಾರ
ನೇಯ್ಗೆಯ ಮೋಡಿ
ಕಣ್ಣ ಕೊರೆವ ಚಿತ್ತಾರ
ಹಳೆ ಹೊಸ ಸೀರೆಗಳ ಥರಾವರಿ
ಮಾರಾಟದ ಮರ್ಜಿ ಪರಿಪರಿ
ಒರಟು ಸೀರೆಗೆ ಬಾಳೆಕಾಯಿ ಹಿಡಿತ
ನಾಜೂಕಿಗೆ ಡಾಬಿನ ಬಿಗಿತ
ಹುಡುಗಿ ಚಂದನದ ಗೊಂಬೆ
ದಿನ ಕಳೆದುಹೋದ ಮೂಕಿ
ಅಬ್ಬರದ ಸದ್ದಿನಲಿ ಕಿವುಡಿ
ಮಿಸುಕದ ನೆಟ್ಟ ಆಲಿಗಳು
ಸೀರೆಯ ಸುತ್ತಿನಲಿ ಜೀವಂತ ಗೊಂಬೆ.

ದುಶ್ಶಾಸನನ ಆರ್ಭಟ
ಕೃಷ್ಣೆಯ ಗೋಳು
ಸಭೆ ಮೂಕ ಪ್ರೇಕ್ಷಕ
ಊರು ಕೇರಿಯ ತುಂಬ ಇದರ ಸೆಳೆತ
ಬಿಚ್ಚಿ ಎಸೆದಾಗ ಸಂತಸದ ಮೊರೆತ

● ಡಾ. ಚಂದ್ರಮತಿ ಸೋಂದಾ

ಗಂಭೀರ

ಮೇಲ್ಮನೆಯ ಗದ್ದುಗೆಯವರು
ಬಹಳ ಗಂಭೀರವಂತೆ

ಹರಿದಾರಿಯಲ್ಲಿ ಹೆಂಗೆಳೆಯರ
ಸೆರಗು, ಗರ್ಭದಲ್ಲಿ, ಕತ್ತರಿಯ ದಾಳಿ

ಮುಖದಲ್ಲಿ ಆ್ಯಸಿಡ್‌ನ ಧಾಳಿ ಕೇಳಿ
ಹೆಂಗಳೆಯರಿಗೆ ಏನಾದರೂ
ಮಾಡಬೇಕು ಅದಕ್ಕಾಗಿ
ಜುಬ್ಬ ದೋತಿಯ ಉಟ್ಟು ಹೊರಟರಂತೆ
ಬಿಸಿರಕ್ತದ ಯುವಕರು ಗದ್ದುಗೆಯವರ
ಹಿಂದೆಯಂತೆ

ಹತ್ತಾರು ಅಬಲಾಶ್ರಮವ ಸುತ್ತಿ
ಹೆಂಗೆಳೆಯರ ಗೋಳು ಕೇಳಿದರಂತೆ
ಹುಟ್ಟು ಹಬ್ಬದ ದಿನ ಏನಾದರೂ
ಮಾಡಬೇಕು ಅದಕ್ಕಾಗಿ ವಿಕ್ಟೋರಿಯ
ರಾಣಿಯ ಸಲಹೆ ಕೇಳಿದರಂತೆ

ಏನಾದರೂ ಮಾಡಿ ಗದ್ದುಗೆಯವರೆ-
ಮಹಿಳೆಯರ ಉದ್ಧಾರಕ್ಕಾಗಿ ಸಾಕಷ್ಟು ದಾರಿಗಳಿವೆ
ಹುಟ್ಟುಹಬ್ಬದ ದಿನ ಗದ್ದುಗೆಯವರ
ಮುಖದಲ್ಲಿ ಯುವಕರನ್ನು ನಾಚಿಸುವ
ರಾಜಕಳೆ ಅಬ್ಬರದಲ್ಲೇ ಹುಟ್ಟುಹಬ್ಬ
ಮುಗಿಯಿತು ಕೆಂಪು ಲೈಟ್ ಬೆಳಕಿನಲ್ಲಿ
ಮಧುಪಾನ ಸೇವಿಸುತ್ತಾ
ಯುವಕರನ್ನು ಕೂರಿಸುತ್ತಾ
ಹರಿದಾರಿಯಲ್ಲಿ ಸೆರಗು ಹರಿದಾಡುವುದು
ನನಗಿಷ್ಟವಿಲ್ಲ ಕರೆದು ತಾ ಆಕೆಯನ್ನು
ನನ್ನ ಅರಮನೆಗೆ ಹಾಗೆಯೇ ಮಾಲ ಡಿ ಕೋರ್ಸ್
ಇಂದಿನಿಂದ ಪ್ರಾರಂಭವಾಗಲಾಕೆಗೆ ಗರ್ಭದಲ್ಲಿ
ಕತ್ತರಿಯದಾಳಿ ನಿವ್ಯಕ್ರೀಮ್ ಚಂದ್ರಮುಖಿಯಂತೆ
ಮುಖದ ಮೇಲೆ ಆ್ಯಸಿಡ್‌ನ ದಾಳಿ
ನನಗಿಷ್ಟವಿಲ್ಲ.

● ತಾಜುಮಾ

ಸಹೃದಯ ಓದುಗರಲ್ಲಿ

ಯಾವುದೇ ಚಳವಳಿ ಸ್ವಾಯತ್ತತೆಯನ್ನು ಉಳಿಸಿಕೊಂಡಾಗ ಮಾತ್ರ ಶಕ್ತಿಯುತವಾಗಲು ಸಾಧ್ಯ. ಮಾನಸ ಸ್ವಾಯತ್ತ ಪರಿಕಲ್ಪನೆಯನ್ನು ತಾನಿಡುವ ಪುಟ್ಟ ಹೆಜ್ಜೆಯಲ್ಲೂ ಜಾರಿಗೆ ತರಲು ಪ್ರಯತ್ನಿಸಿದೆ. ಇದುವರೆಗೂ ಮಾನಸದ ಸಭೆಗೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಮೆಟ್ಟಿಲುಗಳು ಆಸರೆಯಾಗಿದ್ದವು. ಮಾನಸಕ್ಕೆ ತನ್ನದೇ ಆದ ಒಂದು ಕಛೇರಿ ಮಾಡಬೇಕೆಂಬ ಕನಸು ಈಗ ನನಸಾಗಿದೆ. ಈ ಕೆಳಗಿನ ವಿಳಾಸದಲ್ಲಿ ಮಾನಸಕ್ಕೆ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಬಾಡಿಗೆ 1600/-. ಇದು ನಮಗೆ ಹೊರೆಯಾದರೂ, ಮಾನಸ ಸದಸ್ಯರಿಂದ ಸಂಗ್ರಹಿಸುತ್ತಿದ್ದೇವೆ. ಸಹೃದಯರು ಬಾಡಿಗೆ ಹಣವನ್ನು ಕೊಡುಗೆಯಾಗಿ ನೀಡುವುದರ ಮೂಲಕ ನಮ್ಮ ಈ ಪ್ರಯತ್ನಕ್ಕೆ ನೆರವು ನೀಡಬೇಕೆಂದು ಕೋರುತ್ತೇವೆ. ಕೊಡುಗೆ ನೀಡಿದವರ ಹೆಸರುಗಳನ್ನು ಮಾನಸದಲ್ಲಿ ಪ್ರಕಟಿಸಲಾಗುವುದು.

ನೀವು ಮಾನಸಕ್ಕೆ ಹೀಗೆ ಸಹಕರಿಸಬಹುದು :

- ಪತ್ರಿಕೆಗೆ ಚಂದಾದಾರರಾಗುವುದರ ಮೂಲಕ
- ಮಾನಸ ವೇದಿಕೆಗೆ ಸದಸ್ಯರಾಗುವುದರ ಮೂಲಕ
- ಕವನ, ಲೇಖನ, ವರದಿ, ಮುಂತಾದವುಗಳನ್ನು ಕಳಿಸಿಕೊಡುವುದರ ಮೂಲಕ
- ಪತ್ರಿಕೆಯನ್ನು ಪ್ರಾಯೋಜಿಸುವುದರ ಮೂಲಕ

ಸಂಪಾದಕ ಮಂಡಳಿ

REGD. No. : MAG(3) NPP/399(A) / 2006-07
KA/BGS/2074/2007-09

Posted on 9th of every month
at Chamarajpet Post Office

Registered
Magazine



96. Pushpa H S
No.95, Y V Annaiah Road
Yalachenahalli
J P Nagar P O
Bangalore 560 078

ವಿಳಾಸ :

ನಮ್ಮ ಮಾನಸಿ
34/1, 2ನೇ ಕ್ರಾಸ್, ಆಜಾದ್ ನಗರ,
ಚಾಮರಾಜಪೇಟೆ, ಬೆಂಗಳೂರು - 560 018

Edited and owned by H.S. Rajeshwari, 34/1, 2nd Cross, Ajaad Nagar, Chamarajpet, Bangalore - 560 018;
Printed at ILA Mudrana, No. 36, 40 Ft. Road, Raghavanagar, NTY Layout, B'lore - 26. ✆ : 26757159, 32715773